ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಮಾರ್ಚ್ 14, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 302 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999




## ಬಿಜೆಪಿ ಎರಡನೇ ಪಟ್ಟಿ ಬಿಡುಗಡೆ

### ಲೋಕಸಭಾ ಚುನಾವಣೆಗೆ 20 ಕ್ಷೇತ್ರಗಳ ಅಭ್ಯರ್ಥಿಗಳು ಪ್ರಕಟ

ಬೆಂಗಳೂರು, ಮಾ.13- ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಪ್ರತಾಪಸಿಂಹ ಸೇರಿದಂತೆ 9 ಮಂದಿ ಸಂಸದರಿಗೆ ಲೋಕಸಭಾ ಚುನಾವಣೆ ಸ್ಪರ್ಧೆಗೆ ಟಿಕೆಟ್ ನಿರಾಕರಿಸಿರುವ ಬಿಜೆಪಿಯು ಹಳೆಯ ಮುಖಗಳ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಅವಕಾಶ ಕಲ್ಪಿಸಿದೆ.

ಪ್ರಕಟಿಸಿರುವ 20 ಕ್ಷೇತ್ರಗಳ ಅಭ್ಯರ್ಥಿಗಳ ಪೈಕಿ 9 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡಿದ್ದು, ಒಂದು ಕ್ಷೇತ್ರದಲ್ಲಿ ಮಾತ್ರ ಅಭ್ಯರ್ಥಿ ಬದಲಾಯಿಸಿದೆ.

ರಾಜಮನೆತನದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮೈಸೂರು- ಕೊಡಗು ಲೋಕಸಭಾ ಕ್ಷೇತ್ರಕ್ಕೆ, ಡಾ. ಸಿ.ಎನ್. ಮಂಜುನಾಥ್ ಅವರಿಗೆ ಬೆಂಗಳೂರು ಗ್ರಾಮಾಂತರ, ಮಾಜಿ ಶಾಸಕ ಎಸ್. ಬಾಲರಾಜ್ ಅವರನ್ನು ಚಾಮರಾಜ ನಗರದಿಂದ ಬಿಜೆಪಿ ಕಣಕ್ಕಿಳಿಸಿದೆ.

ಕೇಂದ್ರ ಸಚಿವೆ ಶೋಭ ಕರಂದ್ಲಾಜೆ ಅವರಿಗೆ ಈ ಬಾರಿ ಉಡುಪಿ - ಚಿಕ್ಕಮಗಳೂರು ಬದಲಾಗಿ ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಡಲಾಗಿದೆ.

ಕೇಂದ್ರ ಸಚಿವ (4ನೇ ಪುಟಕ್ಕೆ)

## ಸಿದ್ದೇಶ್ವರ ಬಿಗಿ ಪಟ್ಟಿಗೆ ಯಶಸ್ಸು

### ಪತ್ನಿ ಗಾಯತ್ರಿ ಸಿದ್ದೇಶ್ವರಗೆ ಟಿಕೆಟ್ ಘೋಷಣೆ



ದಾವಣಗೆರೆ, ಮಾ. 13 – ದಾವಣಗೆರೆ ಲೋಕಸಭಾ ಕ್ಷೇತ್ರದ ಮೇಲಿನ ಬಿಗಿ ಪಟ್ಟು ಉಳಿಸಿಕೊಳ್ಳುವಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಯಶಸ್ವಿಯಾಗಿದ್ದು, ತಮ್ಮ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಟಿಕೆಟ್ ಪಡೆದುಕೊಂಡಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ದಿವಂಗತ ಜಿ. ಮಲ್ಲಿಕಾರ್ಜುನಪ್ಪ ಅವರು 1996ರಲ್ಲಿ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿಗೆ ಬಿಜೆಪಿ ಬಾವುಟ ಹಾರಿಸಿದ್ದರು. ನಂತರ 1999ರಲ್ಲಿ ಮತ್ತೆ ಗೆಲುವು ಸಾಧಿಸಿದ್ದರು.


ನಂತರ ಜಿ.ಎಂ. ಸಿದ್ದೇಶ್ವರ ಅವರು ದಾವಣಗೆರೆ ಕ್ಷೇತ್ರದಲ್ಲಿ 2004, 2009, 2014 ಹಾಗೂ 2019ರಲ್ಲಿ ಸತತ ಗೆಲುವು ಸಾಧಿಸುತ್ತಾ ಬಂದಿದ್ದಾರೆ.

ಈ ಬಾರಿ ಅವರು ಟಿಕೆಟ್ ಪಡೆಯುವ ವಿಚಾರದಲ್ಲೇ ಜಿಲ್ಲಾ ಬಿಜೆಪಿಯಲ್ಲಿ ಮೊದಲ ಬಾರಿಗೆ ಒಡಕಿನ ಮಾತು ಕೇಳಿ ಬಂದಿತ್ತು. ಅದರಲ್ಲೂ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಎಲ್ಲರಿಗಿಂತ ಮುಂಚೂಣಿಯಲ್ಲಿ ನಿಂತು ಸಿದ್ದೇಶ್ವರ ಅವರಿಗೆ ಟಿಕೆಟ್ ನೀಡಬಾರದು ಎಂದು ಪಟ್ಟು ಹಿಡಿದಿದ್ದರು. ಈ ಬಾರಿ ಬದಲಾವಣೆ ಖಚಿತ ಎಂದು ಬಿಜೆಪಿಯ ಹಲವಾರು ಮುಖಂಡರು ಬಹಿರಂಗವಾಗಿ ಹಾಗೂ ಖಾಸಗಿಯಾಗಿ ಹೇಳಿಕೊಡಿದ್ದರು.

ಆದರೆ, ಸಂಸದ ಸಿದ್ದೇಶ್ವರ ಮಾತ್ರ ಈ ಬಾರಿ ನನಗೆ ಇಲ್ಲವೇ ನನ್ನ ಕುಟುಂಬದವರಿಗೆ ಟಿಕೆಟ್ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದರು. ಅಂತಿಮವಾಗಿ ಸಂಸದ ಸಿದ್ದೇಶ್ವರ ಅವರು ತಮ್ಮ ಪತ್ನಿಗೆ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಬಿಜೆಪಿ ಮತ್ತೊಮ್ಮೆ ಲೋಕಸಭಾ ಚುನಾವಣಾ ಗೆಲುವಿಗಾಗಿ ಜಿ.ಎಂ. ಕುಟುಂಬವನ್ನೇ ಅವಲಂಬಿಸಿದಂತಾಗಿದೆ.

ಬಿಜೆಪಿ ಅಭ್ಯರ್ಥಿ ಪ್ರಕಟವಾಗಿದ್ದರೂ, ಕಾಂಗ್ರೆಸ್ ಅಭ್ಯರ್ಥಿಯ ಕುತೂಹಲ ಮುಂದುವರೆದಿದೆ. ಈ ಬಾರಿಯ ಚುನಾವಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಇಲ್ಲವೇ ಇನ್‌ಸೈಟ್ಸ್ ಐಎಎಸ್‌ನ ಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಅವರಲ್ಲಿ ಒಬ್ಬರಿಗೆ ಟಿಕೆಟ್ ಸಿಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

## ಕಾಂಗ್ರೆಸ್ ಗೆದ್ದರೆ ಮಹಿಳೆಯರಿಗೆ ವರ್ಷಕ್ಕೆ ಲಕ್ಷ ರೂ.



ಧುಳೆ, ಮಾ. 13 – ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಬಡ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ರೂ. ನೀಡಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಘೋಷಿಸಿದ್ದಾರೆ.

ಮಹಾರಾಷ್ಟ್ರದ ಧುಳೆ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಮಹಿಳೆಯರಿಗೆ ಕೇಂದ್ರ ಸರ್ಕಾರದ ಎಲ್ಲ ಉದ್ಯೋಗಗಳಲ್ಲಿ ಶೇ.50ರ ಮೀಸಲಾತಿ ಕಲ್ಪಿಸಲಾಗುವುದು ಎಂದು ಹೇಳಿದರು.

ಮಹಿಳೆಯರಿಗೆ ಕಾಂಗ್ರೆಸ್ ಪಕ್ಷದಿಂದ ಐದು 'ಮಹಿಳಾ ನ್ಯಾಯ ಗ್ಯಾರಂಟಿ'ಗಳನ್ನು ನೀಡಲಾಗುವುದು. ಇದರ ಅಂಗವಾಗಿ ಬಡ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಪ್ರತಿ ವರ್ಷ 1 ಲಕ್ಷ ರೂ. ಜಮಾ ಮಾಡಲಾಗುವುದು ಎಂದವರು ಹೇಳಿದರು.

ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮಧ್ಯಾಹ್ನದ ಬಿಸಿಯೂಟದ ಕಾರ್ಯಕರ್ತೆಯರಿಗೆ ಕೇಂದ್ರ (4ನೇ ಪುಟಕ್ಕೆ)

## ದಾವಣಗೆರೆ ಅರ್ಬನ್ ಬ್ಯಾಂಕಿಗೆ ಕಣವಿ, ಮುಂಡಾಸ್ ನೇಮಕ





ದಾವಣಗೆರೆ, ಮಾ. 13- ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ವೃತ್ತಿಪರ ನಿರ್ದೇಶಕರು ಗಳಾಗಿ ಹಿರಿಯ ಲೆಕ್ಕ ಪರಿಶೋಧಕ ಮುಂಡಾಸ್ ವೀರೇಂದ್ರಕುಮಾರ್ ಮತ್ತು ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಕಣವಿ ನೇಮಕಗೊಂಡಿದ್ದಾರೆ.

ಬ್ಯಾಂಕಿನ ಅಧ್ಯಕ್ಷ ಬಿ.ಸಿ. ಉಮಾಪತಿ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಈ ನೇಮಕ ಮಾಡಲಾಯಿತು. ಕಳೆದ ಅವಧಿಯಲ್ಲಿ (4ನೇ ಪುಟಕ್ಕೆ)






## ಜಾತ್ರೆಗೆ ಚುನಾವಣಾ ನೀತಿ ಚೌಕಟ್ಟು ಸಾಧ್ಯತೆ : ಎಸ್ಪಿ



ದಾವಣಗೆರೆ, ಮಾ. 13 - ಈ ಬಾರಿ ನಗರದ ದುರ್ಗಾಂಬಿಕಾ ಜಾತ್ರೆ, ಓಕುಳಿ ಹಬ್ಬ, ರಂಜಾನ್ ಹಾಗೂ ಗುಡ್‌ಫ್ರೈಡೆ ವೇಳೆಗೆ ಚುನಾವಣೆ ಘೋಷಣೆಯಾಗಿ ನೀತಿ ಸಂಹಿತೆ ಜಾರಿಗೆ ಬಂದಿರುವ ಸಾಧ್ಯತೆ ಇದೆ. ಹೀಗಾಗಿ ನೀತಿ ಸಂಹಿತೆಗೆ ಅನುಗುಣ ವಾಗಿ ಹಬ್ಬ ಹಾಗೂ ಜಾತ್ರೆಗಳ ಆಚರಣೆಗೆ ಸನ್ನದ್ಧವಾಗಿರಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಜಾತ್ರೆ ಹಾಗೂ ಹಬ್ಬಗಳ ಅಂಗವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನೀತಿ ಸಂಹಿತೆ ಜಾರಿಯಾದಲ್ಲಿ ಚುನಾವಣಾ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸಬೇಕಿದೆ. ಸಾರ್ವಜನಿಕ ಹಬ್ಬಗಳ ಆಚರಣೆಗಾಗಿ ಅನುಮತಿ (4ನೇ ಪುಟಕ್ಕೆ)

### ದುರ್ಗಾಂಬಿಕಾ ದೇವಾಲಯದಲ್ಲಿ ಬಲಿ ನಡೆಯುವುದಿಲ್ಲ

ದುರ್ಗಾಂಬಿಕಾ ದೇವಾಲಯದ ಸುತ್ತ ಮುತ್ತ ಪ್ರಾಣಿ ಬಲಿ ನಡೆಯುತ್ತದೆ. ರಸ್ತೆಗಳಲ್ಲಿ ರಕ್ತ ಹರಿಯುತ್ತದೆ. ಇಲ್ಲಿನ ಸ್ವಚ್ಛತೆ ಬಗ್ಗೆ ಗಮನ ಹರಿಸಬೇಕು ಎಂದು ಹಿಂದೂ ಸಮಾಜದ ಮುಖಂಡ ಕೆ.ಬಿ.ಶಂಕರ ನಾರಾಯಣ ಹೇಳಿದ ಮಾತು ಸಭೆಯಲ್ಲಿ ಚರ್ಚೆಗೆ ಕಾರಣವಾಯಿತು.

ಶಂಕರ ನಾರಾಯಣ ಹೇಳಿಕೆಗೆ ಆಕ್ಷೇಪಿಸಿದ ದುರ್ಗಾಂಬಿಕಾ ದೇವಸ್ಥಾನದ ಧರ್ಮದರ್ಶಿ ಚನ್ನಬಸಪ್ಪ ಗೌಡ್ರು, ದೇವಾಲಯದ ಸುತ್ತ ಎಲ್ಲೂ ಪ್ರಾಣಿ ಬಲಿ ನಡೆಯುವುದಿಲ್ಲ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. (4ನೇ ಪುಟಕ್ಕೆ)

## ದೇವಾಲಯದ ಪ್ರಸಾದಕ್ಕೆ ಬಳಸುವ ಕಚ್ಚಾ ಸಾಮಗ್ರಿ ಪರೀಕ್ಷೆಗೆ ಸೂಚನೆ

ಬೆಂಗಳೂರು, ಮಾ. 13 - ದೇವಸ್ಥಾನಗಳಲ್ಲಿ ಪ್ರಸಾದ ಹಂಚಿಕೆಗೂ ಮುನ್ನ ಅದರ ತಯಾರಿಕೆಯ ಕಚ್ಚಾ ಸಾಮಗ್ರಿಗಳನ್ನು ಪರೀಕ್ಷೆಗೆ ಒಳಪಡಿಸಿ ನಂತರ ಬಳಕೆ ಮಾಡುವಂತೆ ಸರ್ಕಾರ ಇಂದಿಲ್ಲಿ ಆದೇಶ ಹೊರಡಿಸಿದೆ.

ಇತ್ತೀಚಿನ ದಿನಗಳಲ್ಲಿ ಪ್ರಸಾದ ಸೇವನೆ ನಂತರ ಸಾರ್ವಜನಿಕರು ಅಸ್ವಸ್ಥಗೊಂಡ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಸರ್ಕಾರ ಈ ತೀರ್ಮಾನಕ್ಕೆ ಬಂದಿದೆ. ಕಚ್ಚಾ ಸಾಮಗ್ರಿಗಳನ್ನು ಎಫ್‌ಎಸ್‌ಎಸ್‌ಎಐ ಅಂಗೀಕೃತ ಹಾಗೂ ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಲಾಗಿದೆ.

## ನಾಮ ಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಕಡ್ಡಾಯ

ಹರಿಹರ, ಮಾ,13 - ರಾಜ್ಯ ಸರ್ಕಾರದ ಆದೇಶದಂತೆ ನಗರ ವ್ಯಾಪ್ತಿಯಲ್ಲಿ ಬರುವ ವ್ಯಾಪಾರಸ್ಥರು ತಮ್ಮ ಅಂಗಡಿಯ ನಾಮ ಫಲಕಗಳಲ್ಲಿ ಶೇ. 60 ರಷ್ಟು ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ ಆದೇಶವನ್ನು ನೀಡಿದ್ದು, ಸರ್ಕಾರದ ಆದೇಶವನ್ನು ಪಾಲಿಸದೆ ಆಂಗ್ಲ (4ನೇ ಪುಟಕ್ಕೆ)

## ಪೌರತ್ವ ಕಾಯ್ದೆ ಜಾರಿ : ಚರ್ಚೆ


ಬೆಂಗಳೂರು, ಮಾ. 13 - ಕೇಂದ್ರ ಸರ್ಕಾರ ಕೇವಲ ಲೋಕಸಭಾ ಚುನಾವಣೆ ದೃಷ್ಟಿಯಿಂದ ಪೌರತ್ವ ಕಾಯ್ದೆ ಜಾರಿ ಮಾಡಿದ್ದು, ರಾಜ್ಯದಲ್ಲಿ ಸಿಎಎ ಅನುಷ್ಠಾನ ಕುರಿತು ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ (4ನೇ ಪುಟಕ್ಕೆ)

CET, NEET
Crash Course
30 Days, 20 Test
Limited Seats
Fee 8,500/- only
WINNERS
CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9886997892
9148596892

ಸವಿನೆನಪು



ದಿ|| ಶ್ರೀ ನೇರ್ಲಿಗೆ ಯಲ್ಲಪ್ಪನವರು
ಸಂಸ್ಥಾಪಕರು, ಶ್ರೀ ರಂಗನಾಥ ಸ್ವಾಮಿ ಭೋವಿ ವಿದ್ಯಾಸಂಸ್ಥೆ (ರಿ.)
ನೇರ್ಲಿಗೆ, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳು ಕಳೆದರೂ
ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ.
ನಿಮ್ಮ ನೆನಪು ಸದಾ ನಮ್ಮ ಮನಗಳಲ್ಲಿ ಹಚ್ಚ ಹಸಿರಾಗಿದೆ.
ನೀವು ಹಾಕಿಕೊಟ್ಟ ಪಥದಲ್ಲಿ ಸಾಗುತ್ತಿರುವ...
ಶ್ರೀಮತಿ ಕೆ. ಲಕ್ಷ್ಮಿ ಮತ್ತು ಮಕ್ಕಳು,
ಶ್ರೀಮತಿ ದೀಪಾ ಹೆಚ್.ಕೆ. ಗಂಗಾಧರ
ಹಾಗೂ ನೇರ್ಲಿಗೆ ವಂಶಸ್ಥರು

K J HYUNDAI
371/271, Avaragere, P B Road, Davangere, Ph: 7022042241, 7022001205, 7022001207, 9148005999.
BVKS Layout, Bheemasamudra Main Road, Chitradurga-577501, Ph: 9980759983, 7022001208, 7022426017, 9629868009, 7022898488.
NH-13, Holalkere Road, Channagiri - 577213, Ph: 6366508866, 7022898487, 9148004999.
Ranebennur – Coming soon

# ಗ್ರಾಮದೇವತೆ ಹಬ್ಬಕ್ಕೆ ಪ್ರಾಣಿ ಬಲಿಗೆ ಅವಕಾಶವಿಲ್ಲ

**ಮಲೇಬೆನ್ನೂರು : ಹಬ್ಬದ ಶಾಂತಿ ಸಭೆಯಲ್ಲಿ ಸಿಪಿಐ ಸುರೇಶ್ ಸಗರಿ**

ಮಲೇಬೆನ್ನೂರು ಮಾ 13 - ಪಟ್ಟಣದಲ್ಲಿ ಇದೇ ದಿನಾಂಕ 19 ರಿಂದ ಹಮ್ಮಿಕೊಂಡಿರುವ ಗ್ರಾಮದೇವತೆಗಳಾದ ಏಕನಾಥೇಶ್ವರಿ - ಕೋಡಿ ಮಾರೇಶ್ವರಿ ಹಾಗೂ ದುರ್ಗಾಂಬಿಕ ಜಾತ್ರೆ ವೇಳೆ ಮೌಢ್ಯಾಚರಣೆಯ ಕೋಣ ಅಥವಾ ಪ್ರಾಣಿ ಬಲಿಗೆ ಅವಕಾಶ ಇರುವುದಿಲ್ಲ ಎಂದು ಹರಿಹರ ಸಿಪಿಐ ಸುರೇಶ್ ಸಗರಿ ಎಚ್ಚರಿಕೆ ನೀಡಿದರು.



ಅವರು ಮಂಗಳವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಸವೇಶ್ವರ ರಥೋತ್ಸವ ಹಾಗೂ ಅಮ್ಮನ ಹಬ್ಬದ ಆಚರಣೆ ಪ್ರಯುಕ್ತ ಕರೆದಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಬ್ಬದ ವೇಳೆ ಸಾವಿರಾರು ಜನ ಭಕ್ತರು ಆಗಮಿಸುತ್ತಿದ್ದು ಆಯೋಜಕರು ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು. ಮೆರವಣಿಗೆ, ಉತ್ಸವದ ವೇಳೆ ಸ್ವಯಂ ಸೇವಕರನ್ನು ನಿಯೋಜಿಸಬೇಕು.

ಪಟ್ಟಣದಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ , ವಾಹನ ನಿಲುಗಡೆ, ವಾಹನ ಸಂಚಾರ ವ್ಯವಸ್ಥೆ ಸಮರ್ಪಕವಾಗಿರಲಿ. ಆರೋಗ್ಯ ಇಲಾಖೆಯವರಿಂದ ಅಗತ್ಯ ಇರುವ ಕಡೆ ಚಿಕಿತ್ಸಾ ಕೇಂದ್ರ ಸ್ಥಾಪಿಸಬೇಕು. ಪರಿಸರ ನೈರ್ಮಲ್ಯ ಕಾಪಾಡಿ.

ದೇವಾಲಯದ ಸುತ್ತ ಬ್ಯಾರಿಕೇಡ್ ಅಳವಡಿಸಿ. ಕಳುವು ಪ್ರಕರಣ ತಡೆಯಲು ಸೂಕ್ತ ಭದ್ರತೆ ಒದಗಿಸಲಾಗುವುದು. ನೀವು ಸಹ ಪೊಲೀಸ್ ಇಲಾಖೆಯೊಟ್ಟಿಗೆ ಸಹಕರಿಸಿ ಎಂದರು.

ಧ್ವನಿವರ್ಧಕ, ವಿದ್ಯುತ್, ಫ್ಲೆಕ್ಸ್ ಅಳವಡಿಸುವ ಮುನ್ನ ಕಡ್ಡಾಯವಾಗಿ ಅನುಮತಿ ಪಡೆಯವುದು ಅಗತ್ಯ. ಒಂದು ವೇಳೆ ಲೋಕಸಭೆ ಚುನಾವಣೆ ಘೋಷಣೆಯಾದಲ್ಲಿ ತೆಗೆದು ಕೊಳ್ಳಬೇಕಾದ ಮುಂಜಾಗ್ರತೆ ಕ್ರಮದ ಕುರಿತು ಜಿಲ್ಲಾಡಳಿತ, ತಹಶೀಲ್ದಾರ್ ನೀಡುವ ಸೂಚನೆ ನಿಯಮ ಪಾಲಿಸಬೇಕು.

ರಂಜಾನ್ ಪ್ರಾರ್ಥನಾ ಸಮಯದಲ್ಲಿ ಜಾಮಿಯಾ ಮಸೀದಿ ರಸ್ತೆಯಲ್ಲಿ ವಾಹನ ನಿಲುಗಡೆಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ಈ ವೇಳೆ ಸಭೆಯಲ್ಲಿದ್ದವರು ಮನವಿ ಮಾಡಿದರು.

ಚಿಟ್ಟಕ್ಕಿ ನಾಗರಾಜ್, ಭಾನುವಳ್ಳಿ ಸುರೇಶ್, ಕೆ.ಪಿ. ಗಂಗಾಧರ್, ಪುರಸಭೆ ಸದಸ್ಯ ನಯಾಜ್, ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಕೆ.ಜಿ. ಪರಮೇಶ್ವರಪ್ಪ ಮಾತನಾಡಿ, ಹಿಟ್ಟಿನ ಕೋಣದ ಬಲಿ ನೀಡಲಾಗುವುದು. ಸರ್ಕಾರದ ನಿಯಮ ಪಾಲಿಸಿ ಶಾಂತಿ ಕಾಪಾಡುವ ಭರವಸೆ ನೀಡಿದರು.

ಪಿಎಸ್ಐ ಪ್ರಭು ಕೆಳಗಿನಮನೆ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪುರಸಭೆ ಸದಸ್ಯ ಶಾ ಅಬ್ರಾರ್, ಸಾಬೀರ್ ಅಲಿ, ಕೆ.ಜಿ. ಲೋಕೇಶ್, ಮುಖಂಡರಾದ ಎಸ್.ಬಿ. ಪುಟ್ಟಪ್ಪ, ಎಸ್. ರಂಗನಾಥ್, ಎ.ಕೆ. ನರಸಿಂಹಪ್ಪ, ಸಿದ್ದೇಶ್ ಮತ್ತಿತರರು ಸಭೆಯಲ್ಲಿದ್ದರು. ಪೊಲೀಸ್ ಬರಹಗಾರ ಶಿವಕುಮಾರ್ ವಂದಿಸಿದರು.

# ಇಂದು ಬಿಜೆಪಿಗೆ ಡಾ. ಮಂಜುನಾಥ್ ಸೇರ್ಪಡೆ



ಬೆಂಗಳೂರು, ಮಾ. 13 - ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂದೇ ಬಿಂಬಿತವಾಗಿರುವ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ನಾಳೆ ಅಧಿಕೃತವಾಗಿ ಬಿಜೆಪಿ ಸೇರ್ಪಡೆಗೊಳ್ಳಲಿದ್ದಾರೆ.

ದೇವೇಗೌಡರ ಕುಟುಂಬದ ಸದಸ್ಯರೊಬ್ಬರು ಕಮಲ ಹಿಡಿಯುತ್ತಿರುವುದು ಇದೇ ಮೊದಲಾಗಿದೆ. ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಹಾಲಿ ಸಂಸದ ಡಿ.ಕೆ.ಸುರೇಶ್ ಅವರನ್ನು ಚುನಾವಣೆಯಲ್ಲಿ ಮಣಿಸಲು ದೆಹಲಿ ಬಿಜೆಪಿಗೆ ಮುಖಂಡರೇ ಮಂಜುನಾಥ್ ಅವರನ್ನು ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡಿದ್ದಾರೆ.

ಕರ್ನಾಟಕದ 21 ಲೋಕಸಭಾ ಕ್ಷೇತ್ರಗಳಿಗೆ ಬಿಜೆಪಿ ವರಿಷ್ಠರು ನಾಳೆ ಸಂಜೆ ವೇಳೆಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಿದ್ದು, ಮೊದಲ ಪಟ್ಟಿಯಲ್ಲೇ ಮಂಜುನಾಥ್ ಹೆಸರು ಇರಲಿದೆ. ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆಯದೇ ಟಿಕೆಟ್ ಘೋಷಣೆ ಸರಿಯಲ್ಲ ಎಂಬ ಕಾರಣಕ್ಕೆ ನಾಳೆ ಬೆಳಗ್ಗೆ ಪಕ್ಷದ ಕಚೇರಿಯಲ್ಲಿ ಮಂಜುನಾಥ್ ಅವರನ್ನು ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ.


ಪಕ್ಷಕ್ಕೆ ಸೇರ್ಪಡೆಗೂ ಮುನ್ನ ಮಂಜುನಾಥ್ ಇಂದು ಸಂಜೆ ಯಡಿಯೂರಪ್ಪ ನಿವಾಸಕ್ಕೆ ತೆರಳಿ ಅವರೊಂದಿಗೆ ಚರ್ಚಿಸಿದ್ದಲ್ಲದೆ, ಸಹಕಾರ ಕೋರಿದರು.

ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ನೋಡಿಕೊಳ್ಳುತ್ತಿರುವ ರಾಧಾ ಮೋಹನ್ ದಾಸ್ ಅಗರವಾಲ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಕ್ಷೇತ್ರದ ಚುನಾವಣಾ ಉಸ್ತುವಾರಿ ಸಿ.ಪಿ.ಯೋಗೇಶ್ವರ್ ಹಾಗೂ ಮುನಿರತ್ನ ಅವರ ಸಮ್ಮುಖದಲ್ಲಿ ಮಂಜುನಾಥ್ ಕಮಲದ ಕೈಹಿಡಿಯಲಿದ್ದಾರೆ. ಮಂಜು ನಾಥ್ ಇನ್ನೂ ಬಿಜೆಪಿ ಸೇರಿಲ್ಲ, ಆದರೆ, ರಾಜರಾಜೇಶ್ವರಿ ನಗರದಲ್ಲಿ ಚುನಾವಣಾ ಸಿದ್ಧತಾ ಸಭೆಗಳಲ್ಲಿ ಭಾಗವಹಿಸಿದ್ದಾರೆ.

## ಖರ್ಗೆ ತವರು ಜಿಲ್ಲೆಯಿಂದ ಬಿಜೆಪಿ ಅಭಿಯಾನಕ್ಕೆ ಸಿದ್ಧತೆ

ಬೆಂಗಳೂರು, ಮಾ. 13 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಂಬರುವ ಲೋಕಸಭಾ ಚುನಾವಣೆಗಾಗಿ ಕರ್ನಾಟಕದ ಪ್ರಚಾರ ಅಭಿಯಾನಕ್ಕೆ ಕಲಬುರಗಿಯಿಂದ ಚಾಲನೆ ನೀಡಲಿದ್ದಾರೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆಯಾದ ಕಲಬುರಗಿಯಲ್ಲಿ ಇದೇ ದಿನಾಂಕ 16ರಂದು ಪ್ರಧಾನಿ ಮೋದಿ ಸಮಾವೇಶ ನಡೆಸಲಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

# 23 ಶ್ವಾನ ತಳಿಗಳ ನಿಷೇಧ



ನವದೆಹಲಿ, ಮಾ. 13 – ಸಾಕು ನಾಯಿಗಳಿಂದ ದಾಳಿಗೆ ಸಿಲುಕಿ ಜನರು ಸಾವನ್ನಪ್ಪುತ್ತಿರುವ ಘಟನೆಗಳು ದೇಶಾದ್ಯಂತ ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ 23 ಉಗ್ರ ಸ್ವಭಾವದ ಶ್ವಾನಗಳ ಮೇಲೆ ನಿಷೇಧ ಹೇರುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಪಿಟ್‌ಬುಲ್ ಟೆರಿಯರ್, ಅಮೆರಿಕನ್ ಬುಲ್ಡಾಗ್, ರಾಟ್‌ವೀಲರ್ ಹಾಗೂ ಮಸ್ಟೀಫ್ ಸೇರಿದಂತೆ 23 ಶ್ವಾನಗಳನ್ನು ಮನೆಗಳಲ್ಲಿ ಹೊಂದದಂತೆ ನಿಷೇಧ ಹೇರಬೇಕು ಎಂದು ರಾಜ್ಯಗಳಿಗೆ ತಿಳಿಸಲಾಗಿದೆ.

ಕೇಂದ್ರ ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಇಲಾಖೆಯ ಮುಖ್ಯ ಕಾರ್ಯದರ್ಶಿ ಈ ಬಗ್ಗೆ ಪತ್ರ ಬರೆದಿದ್ದಾರೆ. ಈಗಾಗಲೇ ಈ ತಳಿಯ ಶ್ವಾನಗಳನ್ನು ಹೊಂದಿದ್ದರೆ, ಅವುಗಳ ಸಂತತಿ ಬೆಳೆಯದಂತೆ ಸಂತಾನ ಶಕ್ತಿ ಹರಣಗೊಳಿಸಬೇಕು ಎಂದು ತಿಳಿಸಲಾಗಿದೆ.

ಉಗ್ರ ಸ್ವಭಾವದ ಕೆಲ ಶ್ವಾನಗಳ ದಾಳಿಗೆ ಸಿಲುಕಿ ಜನರು ಸಾವನ್ನಪ್ಪುತ್ತಿರುವ ಬಗ್ಗೆ ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿತ್ತು. ಈ ಬಗ್ಗೆ ಪರಿಶೀಲಿಸಲು ಸಮಿತಿಯೊಂದನ್ನೂ ಸಹ ರಚಿಸಿತ್ತು. ಸಮಿತಿಯ ಶಿಫಾರಸ್ಸಿನ ಮೇಲೆ 23 ತಳಿಗಳ ನಿಷೇಧಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

# ತರಾತುರಿ ಕೆಲಸ ಬೇಡ, ಗುಣಮಟ್ಟದ ಕಾಮಗಾರಿ ಮಾಡಿ

## ಗುತ್ತಿಗೆದಾರರಿಗೆ ನಿರ್ದೇಶನ ನೀಡಿದ ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಮಾ.13 - ಗುತ್ತಿಗೆದಾರರು ತರಾತುರಿಯಲ್ಲಿ ಕೆಲಸ ಮಾಡದೆ ಗುಣಮಟ್ಟದ ಕಾಮಗಾರಿ ಮಾಡಿ ಎಂದು ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.




ಪಟ್ಟಣದ ಕೊಟ್ಟೂರು ವೃತ್ತದ ಬಳಿ 2023-24ನೇ ಸಾಲಿನ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಮೈಕ್ರೋ ಯೋಜನೆ ಅಡಿಯಲ್ಲಿ ಹರಪನಹಳ್ಳಿ ಹಾಗೂ ತೆಲಗಿ, ಹಳ್ಳಿಕೇರಿ, ರಾಗಿಮಸಲವಾಡ ಗ್ರಾಮಗಳಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆ ಹಾಗೂ ಇತರೆ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಆರು ಕಾಮಗಾರಿಗಳಿಗೆ 788.50 ಲಕ್ಷ ಅನುದಾನ ತಂದಿದ್ದು, ಮಳೆಗಾಲ ಬರುವುದರೊಳಗೆ ಗುಣಮಟ್ಟದ ಕಾಮಗಾರಿ ಮಾಡುವಂತೆ ತಿಳಿಸಿದರು.

ಇಂಜಿನಿಯರ್ ಪ್ರಕಾಶ ಪಟೇಲ್ ಮಾತನಾಡಿ, ಕಲ್ಯಾಣ ಕರ್ನಾಟಕದ ಯೋಜನೆ ಅಡಿಯಲ್ಲಿ ಹಿಂದುಳಿದ ತಾಲ್ಲೂಕಿಗೆ ಸಾಕಷ್ಟು ಅನುದಾನ ತಂದು ಶಾಸಕರು ಅಭಿವೃದ್ಧಿಗೆ ಮುಂದಾಗಿದ್ದಾರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಉಳಿದ ಕಾಮಗಾರಿಗಳನ್ನು ಪೂರೈಸಲಿದ್ದಾರೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ. ಚಿಗಟೇರಿ ಬ್ಲಾಕ್ ಅಧ್ಯಕ್ಷ ಕುಬೇರಗೌಡ, ಪುರಸಭೆ ಸದಸ್ಯರುಗಳಾದ ಟಿ.ವೆಂಕಟೇಶ್, ಲಾಟಿ ದಾದಾಪೀರ್ ಮುಖಂಡರಾದ ಹುಲಿಕಟ್ಟಿ ಚಂದ್ರಪ್ಪ, ಓ.ರಾಮಣ್ಣ, ಎಚ್. ಎಂ.ಕೊಟ್ರಯ್ಯ, ಎಚ್.ಎಂ.ಮಂಜುನಾಥ, ಸಿ.ಪಾಲಾಕ್ಷ, ಕೆ.ಅಶೋಕ, ತಿಮ್ಮಲಪುರದ ಈಶ, ಗುತ್ತಿಗೆದಾರರಾದ ಬಾಣದ ಅಂಜಿನಪ್ಪ ಮತ್ತು ಟಿ.ಉಮಾಕಾಂತ, ನಂದಿಬೇವೂರು ಮಂಜುನಾಥ, ಎಲ್.ಜಿ.ಚೇತನ ಸೇರಿದಂತೆ, ಇತರರು ಇದ್ದರು.

## ಮಲೇಬೆನ್ನೂರಿನಲ್ಲಿ ಇಂದು ತೇರು

ಶ್ರೀ ಬಸವೇಶ್ವರ ದೇವರ ರಥೋತ್ಸವವು ಇಂದು ಸಂಜೆ 4.30ಕ್ಕೆ ಜರುಗಲಿದೆ. ಬೆಳಿಗ್ಗೆ 8ಕ್ಕೆ ವಿವಿಧ ಪೂಜೆಗಳ ನಂತರ ಸಣ್ಣ ಉತ್ಸವದ ಮೆರವಣಿಗೆ ಮತ್ತು 9 ಗಂಟೆಗೆ ರಥಕ್ಕೆ ತೈಲಾಭಿಷೇಕ, ಮಧ್ಯಾಹ್ನ 12 ರಿಂದ ದೇವಸ್ಥಾನದಲ್ಲಿ ದಾಸೋಹ ನಡೆಯಲಿದ್ದು, ಇದೇ ದಿನ ಸಂಜೆ 4.30ಕ್ಕೆ ಗ್ರಾಮದ ಎಲ್ಲಾ ದೇವರ ಒಡಗೂಡಿ ಶ್ರೀ ಬೀರಲಿಂಗೇಶ್ವರ ಕಾರ್ಣಿಕೋತ್ಸವದ ನಂತರ ಶ್ರೀ ಬಸವೇಶ್ವರ ದೇವರ ರಥೋತ್ಸವವು ಜರುಗಲಿದೆ.

ನಾಳೆ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ವಿವಿಧ ಪೂಜೆಗಳ ನಂತರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ದೇವಸ್ಥಾನದಲ್ಲಿ ಜವಳ, ದಿಂಡು ಉರುಳುಸೇವೆ ಸೇರಿದಂತೆ ಇತ್ಯಾದಿ ಸೇವೆಗಳು ನಡೆಯಲಿದ್ದು, ಸಂಜೆ 8 ಕ್ಕೆ ಓಕುಳಿ ನಂತರ ದೇವರುಗಳನ್ನು ದೇವ ಸ್ಥಾನಗಳಿಗೆ ಬೀಳ್ಕೊಡಲಾಗುವುದು.

## 22,217 ಚುನಾವಣಾ ಬಾಂಡ್ ಖರೀದಿ

ನವದೆಹಲಿ, ಮಾ. 13 – ಚುನಾವಣಾ ಬಾಂಡ್ ಯೋಜನೆಯಡಿ ಏಪ್ರಿಲ್ 1, 2019ರಿಂದ ಕಳೆದ ಫೆಬ್ರವರಿ 15ರ ನಡುವೆ 22,217 ಬಾಂಡ್‌ಗಳನ್ನು ಖರೀದಿಸಲಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತಿಳಿಸಿದೆ. ಸುಪ್ರೀಂ ಕೋರ್ಟ್‌ಗೆ ಈ ಮಾಹಿತಿ ನೀಡಿರುವ ಎಸ್.ಬಿ.ಐ., ಇದುವರೆಗೂ 22,030 ಬಾಂಡ್‌ಗಳ ಹಣವನ್ನು ರಾಜಕೀಯ ಪಕ್ಷಗಳು ಬಿಡಿಸಿಕೊಂಡಿವೆ ಎಂದು ಹೇಳಿದೆ.

## ಹರಿಹರದಲ್ಲಿ 22ರಂದು ಹೋಳಿ ಹುಣ್ಣಿಮೆ

ಹರಿಹರ,ಮಾ.13- ನಗರದ ನಡುವಲ ಪೇಟೆ ಯುವಕ ಸಂಘದ ಆಶ್ರಯದಲ್ಲಿ 62ನೇ ವರ್ಷದ ಹೋಳಿ ಹುಣ್ಣಿಮೆ ಮಹೋತ್ಸವ ಆಚರಿಸಲಾಗುವುದು. ಇದೇ ದಿನಾಂಕ 22ರಂದು ಸಂಜೆ 6 ಗಂಟೆಯಿಂದ ಶ್ರೀ ನಾಮದೇವ ಕಲ್ಯಾಣ ಮಂಟಪದಿಂದ ರಾಜ ಬೀದಿಗಳಲ್ಲಿ ಹಲಗಿ ಉತ್ಸವ ಮೂಲಕ ತೆರಳಿ ನಡುವಲಪೇಟೆಯಲ್ಲಿ ಇರುವ ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುವುದು.

24 ರಂದು ಭಾನುವಾರ ಸಂಜೆ 7 ಗಂಟೆಯಿಂದ ವಿಶೇಷ ಪೂಜೆ ಮತ್ತು ಪ್ರಸಾದ ವಿತರಣೆ, ರಾತ್ರಿ 11.50 ಕ್ಕೆ ಸಲ್ಲುವ ಪೂರ್ವ ನಕ್ಷತ್ರದಲ್ಲಿ ಕಾಮದಹನ ನೆರವೇರಿಸಲಾಗುವುದು. 25ರ ಸೋಮವಾರ ಹೋಳಿ ಹಬ್ಬ. ಮಧ್ಯಾಹ್ನ 1 ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಪುತ್ರನಿಗೆ ತಪ್ಪಿದ ಟಿಕೆಟ್, ಬಂಡಾಯದ ಸೂಚನೆ ನೀಡಿದ ಕೆ.ಎಸ್. ಈಶ್ವರಪ್ಪ



ಶಿವಮೊಗ್ಗ, ಮಾ. 13 - ತಮ್ಮ ಪುತ್ರ ಕಾಂತೇಶ್‌ಗೆ ಲೋಕಸಭಾ ಟಿಕೆಟ್ ತಪ್ಪಿದ ಬೆನ್ನಲ್ಲೇ ಮಾಜಿ ಸಚಿವ ಹಾಗೂ ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಅಸಮಾಧಾನ ಹೊರ ಹಾಕಿದ್ದು, ಪಕ್ಷದ ವಿರುದ್ಧ ಬಂಡಾಯ ಏಳುವ ಸೂಚನೆಯನ್ನೂ ನೀಡಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಕಾಂತೇಶ್‌ಗೆ ಹಾವೇರಿ ಕ್ಷೇತ್ರದಿಂದ ಟಿಕೆಟ್ ಕೊಡಿಸುವ ಭರವಸೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಕಾಂತೇಶ್ ಆ ಭಾಗದಲ್ಲಿ ಓಡಾಡಿದ್ದ, ಜನರ ವಿಶ್ವಾಸ ಗಳಿಸಿದ್ದ. ಈಗ ಯಡಿಯೂರಪ್ಪ ತಮ್ಮ ಮಾತನ್ನು ಉಳಿಸಿಕೊಳ್ಳಲಿಲ್ಲ ಎಂದು ಬೇಸರ ಹೊರ ಹಾಕಿದರು.

ಇದೀಗ ನನ್ನ ಬೆಂಬಲಿಗರು ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವಂತೆ ಒತ್ತಾಯಿಸುತ್ತಿದ್ದಾರೆ. ನನಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಹೇಳಿದರು.

ಮಾರ್ಚ್ 15 ರಂದು ನಾನು ಸಭೆ ಕರೆದಿದ್ದೇನೆ. ಆ ಸಭೆಯ ಅಭಿಪ್ರಾಯ ಆಧರಿಸಿ ಮುಂದುವರಿಯುತ್ತೇನೆ. ತಾಯಿ ಸ್ಥಾನದಲ್ಲಿರುವ ಪಕ್ಷದ ಕತ್ತು ಹಿಸುಕುತ್ತಿದ್ದಾರೆ. ತಾಯಿ ಸ್ಥಾನದಲ್ಲಿರುವ ಪಕ್ಷವನ್ನು ಉಳಿಸುವಂತೆ ಕಾರ್ಯಕರ್ತರು ನನಗೆ ಒತ್ತಾಯಿಸುತ್ತಿದ್ದಾರೆ ಎಂದು ಈಶ್ವರಪ್ಪ ತಿಳಿಸಿದರು.

ನಾನು ಕೇವಲ ಸಂಸದನಾಗುವುದಷ್ಟೇ ಅಲ್ಲದೇ, ಬಿಜೆಪಿಗೂ ಒಳ್ಳೆಯ ಭವಿಷ್ಯ ಸಿಗಬೇಕು. ಈ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದವರು ಹೇಳಿದರು.

# 18 ರಂದು ಶಿವಮೊಗ್ಗಕ್ಕೆ ಪ್ರಧಾನಿ ಮೋದಿ



ದಾವಣಗೆರೆ, ಮಾ. 13- ಇದೇ ದಿನಾಂಕ 18 ರಂದು ಮಧ್ಯಾಹ್ನ 1 ಗಂಟೆಗೆ ಶಿವಮೊಗ್ಗ ನಗರದ ಅಲ್ಲಮಪ್ರಭು ಮೈದಾನದಲ್ಲಿ ಏರ್ಪಾಡಾಗಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಹಾಗೂ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಗಳ ಜನತೆಯನ್ನು ಉದ್ದೇಶಿಸಿ ಅವರು ಮಾತನಾಡಲಿದ್ದಾರೆಂದು ಹೇಳಿದರು.

ಕಳೆದ ಹತ್ತು ವರ್ಷಗಳಲ್ಲಿ ಈ ದೇಶವನ್ನು ಆರ್ಥಿಕವಾಗಿ, ರಕ್ಷಣಾತ್ಮಕವಾಗಿ, ಆರೋಗ್ಯಕರ ವಿಷಯವಾಗಿ ರೈತರ ಕಷ್ಟಗಳಲ್ಲಿ ಯುವಕರ, ಮಹಿಳೆಯರ, ಬಡವರ ವಿಚಾರದಲ್ಲಿ ಆಶಾಕಿರಣವಾಗಿ ಹೊರಹೊಮ್ಮಿರುವ ಪ್ರಧಾನಿ ನರೇಂದ್ರ ಮೋದಿ ರಾಜ್ಯಕ್ಕೆ ಆಗಮಿಸುತ್ತಿರುವುದು ಸಂತಸದ ವಿಚಾರ ಎಂದರು.

ಶಿವಮೊಗ್ಗ ಅಲ್ಲಮಪ್ರಭು ಮೈದಾನದ 50 ಎಕರೆ ವಿಶಾಲವಾದ ಜಾಗದಲ್ಲಿ ಪ್ರಧಾನ ಮಂತ್ರಿಗಳು ಸಭೆಯನ್ನು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಶಿವಮೊಗ್ಗ ಜಿಲ್ಲಾ ಭಾರತೀಯ ಜನತಾ ಪಾರ್ಟಿ ವ್ಯವಸ್ಥೆಯನ್ನು ಈಗಾಗಲೇ ಮಾಡುತ್ತಿದೆ. ಪ್ರಧಾನ ಮಂತ್ರಿಗಳ ಕಾರ್ಯಕ್ರಮಕ್ಕೆ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಗಳಿಂದ ಕನಿಷ್ಠ ಐದು ಲಕ್ಷ ಜನ ಸೇರುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೆ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ದಾವಣಗೆರೆ ಉತ್ತರ ಮತ್ತು ದಕ್ಷಿಣ, ಜಗಳೂರು, ಹರಪನಹಳ್ಳಿ, ಮಾಯಕೊಂಡ, ಚನ್ನಗಿರಿ, ಹರಿಹರ, ಹೊನ್ನಾಳಿ ವಿಧಾನಸಭಾ ಕ್ಷೇತ್ರಗಳಿಂದ ಸುಮಾರು ಒಂದು ಲಕ್ಷಕ್ಕೂ ಅಧಿಕ ಜನ ಸೇರುವ ನಿರೀಕ್ಷೆ ಇದೆ ಎಂದು ಹೇಳಿದರು.

ವಿಶೇಷವಾಗಿ ಹೊಸ ಮತದಾರರನ್ನು, ರೈತರು, ಮಹಿಳೆಯರು, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಯ ಹಾಗೂ ಹಿಂದುಳಿದ ವರ್ಗದ ಹಾಗೂ ಅಲ್ಪಸಂಖ್ಯಾತ ಬಂಧುಗಳು ತಂಡ ತಂಡವಾಗಿ ಬರುವ ನಿರೀಕ್ಷೆಯನ್ನು ಭಾರತೀಯ ಜನತಾ ಪಾರ್ಟಿ ಹೊಂದಿದೆ ಎಂದರು.

ಕಳೆದ 10 ವರ್ಷಗಳಿಂದ ಮೋದಿಯವರು ನೀಡಿದಂತಹ ಯೋಜನೆಗಳನ್ನು ಜನರಿಗೆ ತಿಳಿಸುವ ಉದ್ದೇಶ ಹೊಂದಲಾಗಿದೆ. ಜೊತೆಗೆ ರಾಮಮಂದಿರ ಉದ್ಘಾಟನೆ ನಂತರ ಇದೇ ಮೊದಲಿಗೆ ರಾಜ್ಯಕ್ಕೆ ಆಗಮಿಸುತ್ತಿದ್ದು, ಜನರು ಕಾತರದಿಂದ ಕಾಯುತ್ತಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಬಿ.ಪಿ. ಹರೀಶ್, ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮುಖಂಡರಾದ ಧನಂಜಯ ಕಡ್ಲೇಬಾಳು, ಸತೀಶ್ ಕೊಳೇನಹಳ್ಳಿ, ಶಿವರಾಜ್ ಪಾಟೀಲ್, ಅನಿಲ್ ಕುಮಾರ್ ನಾಯಕ್, ಕೊಟ್ರೇಶಗೌಡ್ರು, ಶಾಮನೂರು ಹರೀಶ್, ಶಶಿಧರ್, ಹೆಚ್. ಪಿ. ವಿಶ್ವಾಸ್ ಉಪಸ್ಥಿತರಿದ್ದರು.

## ಇಂದು ನಗರಕ್ಕೆ ಮಾಳವಿಕ



ದಾವಣಗೆರೆ ಜಿಲ್ಲಾ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 12.30 ಕ್ಕೆ ನಡೆಯುವ ಸಭೆಯಲ್ಲಿ ಬಿಜೆಪಿ ಮುಖಂಡರಾದ ಮಾಳವಿಕಾ ಅವಿನಾಶ್ ಅವರು ಪಕ್ಷದ ಕಾರ್ಯಕರ್ತರು, ಮುಖಂಡರೊಂದಿಗೆ ಚರ್ಚಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ ತಿಳಿಸಿದರು.

## ಎಂಪಿ ಸಿದ್ದೇಶ್ವರರ ಬಗ್ಗೆ ಹಗುರ ಮಾತು ಸಲ್ಲದು


ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಂಸದ ಸಿದ್ದೇಶ್ವರರ ಬಗ್ಗೆ ಹಗುರವಾಗಿ ಮಾತನಾಡಿರುವುದು ಸಲ್ಲದು ಎಂದು ಶಾಸಕ ಹರೀಶ್ ಹೇಳಿದರು.

ಎಂಪಿ ಅವರ ಆರೋಗ್ಯದ ಬಗ್ಗೆ ಮಾತನಾಡಬಾರದಿತ್ತು. ಅದರ ಬದಲು ಹಿರಿಯರ ಆರೋಗ್ಯ ವಿಚಾರಿಸಿದ್ದರೆ ಮಲ್ಲಿಕಾರ್ಜುನ್ ದೊಡ್ಡವರಾಗಿ ಬಿಂಬಿತರಾಗುತ್ತಿದ್ದರು. ಮಲ್ಲಿಕಾರ್ಜುನ್ ಸದನದಲ್ಲೇ ಇರುವುದಿಲ್ಲ. ಕನಿಷ್ಠ ಒಂದು ಗಂಟೆ ಕಾಲ ಸದನದಲ್ಲಿ ಕಳೆದಿಲ್ಲ. ಅವರು ಉತ್ತರಿಸಬೇಕಾದ ಕಡೆ ಅವರ ಹಿರಿಯ ಸಚಿವರು ಉತ್ತರಿಸುತ್ತಾರೆ ಎನ್ನುವ ಮೂಲಕ ಎಸ್ಸೆಸ್ಸೆಮ್ ಕಾರ್ಯವೈಖರಿ ಬಗ್ಗೆ ಮಾತನಾಡಿದರು.

## 15 ರಂದು 10 ವರ್ಷಗಳ ಸಾಧನೆಯ ರಿಪೋರ್ಟ್ ಕಾರ್ಡ್ ಬಿಡುಗಡೆ

ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೆ ವಾಣಿ ಹೊಂಡಾ ಶೋ ರೂಂ ಆವರಣದಲ್ಲಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಸಂಸದ ಸಿದ್ದೇಶ್ವರ ಅವರ ಹತ್ತು ವರ್ಷಗಳ ಸಾಧನೆಯ ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಲಿದ್ದಾರೆಂದು ರಾಜಶೇಖರ್ ತಿಳಿಸಿದರು.


## ಪ್ರಥಮ ವರ್ಷದ ಸವಿನೆನಪು



ಜನನ : 1942 ಮರಣ : 2023

ನಿವೃತ್ತ ಶಿರಸ್ತೇದಾರರಾದ

**ಶ್ರೀ ದಿ. ಕೆ.ಹೆಚ್. ರೇವಣಸಿದ್ದಯ್ಯ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪುತ್ರ-ಸೊಸೆ : **ಶ್ರೀಮತಿ ಸುಜಾತ ಮತ್ತು ಹಾಲೇಶ್ ಕರ್ಕಿ**

ಮೊಮ್ಮಗ : **ಚಿ. ವಿಘ್ನೇಶ್ ಹೆಚ್. ಕರ್ಕಿ**

**ಕರ್ಕಿಕೆರೆ ಮಠದ ಬಂಧುಗಳು ಮತ್ತು ವಂಶಸ್ಥರು.**


## 105 ವರ್ಷದ ಕೆಂಚಮ್ಮ ನಿಧನ



ಹೊನ್ನಾಳಿ ತಾಲ್ಲೂಕು ಕ್ಯಾಸಿನಕೆರೆ ಗ್ರಾಮದ ಶತಾಯುಷಿ ಕೆಂಚಮ್ಮ (105) ಕೋಂ ಲೇಟ್ ಹಟ್ಟಿಹಾಳ ಕರಿಯಪ್ಪ ಇವರು ಹಿರೇಗೋಣಿಗೆರೆ ಗ್ರಾಮದಲ್ಲಿ 12.3.2024 ಮಂಗಳವಾರ ರಾತ್ರಿ ನಿಧನರಾದರು. ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಬುಧವಾರ ಮಧ್ಯಾಹ್ನ ಸ್ವ-ಗ್ರಾಮ ಕ್ಯಾಸಿನಕೆರೆಯಲ್ಲಿ ನೆರವೇರಿಸಲಾಯಿತು.


## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 01.07.1975 ನಿಧನ : 06.03.2024

ಹರಪನಹಳ್ಳಿ ತಾಲ್ಲೂಕು ಹಿರೇಮೇಗಳಗೆರೆ ಗ್ರಾಮದ ವಾಸಿ

**ಶ್ರೀ ಸಿದ್ದನಗೌಡ ಪಾಟೀಲ್**

ಅವರ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 14.03.2024ರ ಗುರುವಾರದಂದು ಬೆಳಿಗ್ಗೆ 10.30ಕ್ಕೆ ಸ್ವಗ್ರಾಮದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿಸುತ್ತೇವೆ.

**ದುಃಖತಪ್ತ ಕುಟುಂಬ ವರ್ಗ**

**ಲಿಂ|| ಶ್ರೀಮತಿ ಸರ್ವಮಂಗಳಮ್ಮ, ಲಿಂ|| ಶ್ರೀ ಪಾಟೀಲ್ ರಾಮಲಿಂಗನಗೌಡರು,**

**ಧರ್ಮಪತ್ನಿ ಶ್ರೀಮತಿ ಭಾಗ್ಯ ಪಾಟೀಲ್**

**ವಂಶಸ್ಥರು ಮತ್ತು ಕುಟುಂಬ ವರ್ಗದವರು**

**ಹಿರೇಮೇಗಳಗೆರೆ ಗ್ರಾಮಸ್ಥರು ಹಾಗೂ ಬಂಧುಗಳು.**

## ಮೂರನೇ ವರ್ಷದ ಪುಣ್ಯಸ್ಮರಣೆ



**ಲಿ|| ಶರಣ ಹನಗವಾಡಿ ನಾರಪ್ಪನವರು**

(ಜನನ : 05.05.1940 ನಿಧನ : 14.05.2021)

ನಿವೃತ್ತ ಡೆಪ್ಯೂಟಿ ಲೀಡರ್, ಕಿರ್ಲೋಸ್ಕರ್, ಹರಿಹರ

ನೀವೂ ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

**- ದುಃಖತಪ್ತ ಕುಟುಂಬ**

**ಶ್ರೀಮತಿ ಹನಗವಾಡಿ ಕಮಲಮ್ಮ ಮತ್ತು ಪ್ರಸನ್ನಕುಮಾರ್ ಹೆಚ್.ಎನ್.**

**ಹಾಗೂ ಮಕ್ಕಳು ದಾವಣಗೆರೆ ಹನಗವಾಡಿ ವಂಶಸ್ಥರು,**

**ಎಲೇಬೇತೂರು ಗ್ರಾಮಸ್ಥರು**

## ಸವಿನೆನಪು



**ದಿ|| ಶ್ರೀ ನೇರ್ಲಿಗೆ ಯಲ್ಲಪ್ಪನವರು,** ಸಂಸ್ಥಾಪಕರು

**ಶ್ರೀ ರಂಗನಾಥ ಸ್ವಾಮಿ ವಿದ್ಯಾಭಿವೃದ್ಧಿ ಸಮಿತಿ (ರಿ.) ನೇರ್ಲಿಗೆ.**

ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳು ಕಳೆದರೂ ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ. ನಿಮ್ಮ ನೆನಪು ಸದಾ ನಮ್ಮ ಮನಗಳಲ್ಲಿ ಹಚ್ಚ ಹಸಿರಾಗಿದೆ. ನೀವು ಹಾಕಿಕೊಟ್ಟ ಪಥದಲ್ಲಿ ಸಾಗುತ್ತಿರುವ,

**ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು**

**ಶ್ರೀ ರಂಗನಾಥ ಸ್ವಾಮಿ ವಸತಿ ಪ್ರೌಢಶಾಲೆ ನೇರ್ಲಿಗೆ,** ದಾವಣಗೆರೆ ತಾ||


## ಜೆ. ಸೋಮನಾಥ್‌ಗೆ ಪತ್ನಿ ವಿಯೋಗ



ದಾವಣಗೆರೆ,ಮಾ.13- ನಗರದ ವೀರಶೈವ ಸಮಾಜದ ಹಿರಿಯ ಮುಖಂಡ ಜೆ. ಸೋಮನಾಥ್ ಅವರ ಧರ್ಮಪತ್ನಿ ಶ್ರೀಮತಿ ಜೆ.ಶಾಂತಮ್ಮ ಅವರು ಇಂದು ಬೆಳಗಿನಜಾವ 4.30ಕ್ಕೆ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ ಸುಮಾರು 77 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶಾಮನೂರು ರುದ್ರಭೂಮಿಯಲ್ಲಿ ಸಂಜೆ ನೆರವೇರಿತು.

ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕರುಗಳಾದ ಎಂ. ಬಸವರಾಜನಾಯ್ಕ, ಪ್ರೊ. ಲಿಂಗಣ್ಣ ಸೇರಿದಂತೆ, ಅನೇಕ ಗಣ್ಯರು ಮೃತರ ನಿವಾಸಕ್ಕೆ ಭೇಟಿ ನೀಡಿ ಅಗಲಿದ ಶಾಂತಮ್ಮ ಅವರ ಅಂತಿಮ ದರ್ಶನ ಪಡೆದರು.

## ಪಿಹೆಚ್‌ಡಿ : ಅರ್ಜಿ ಸಲ್ಲಿಕೆಗೆ ಆಹ್ವಾನ

ದಾವಣಗೆರೆ, ಮಾ. 13 - ದಾವಣಗೆರೆ ವಿಶ್ವ ವಿದ್ಯಾನಿಲಯದಲ್ಲಿ ಪಿಹೆಚ್‌ಡಿ ಸಂಶೋಧನಾ ಸ್ಥಾನಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ 19 ರವರೆಗೆ ಅವಧಿ ವಿಸ್ತರಿಸಲಾಗಿದೆ. ವಿವರಕ್ಕೆ ವಿವಿ ವೆಬ್‌ಸೈಟ್ www.davangereuniversity.ac.inನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಚುನಾವಣಾ ಬಾಂಡ್ ವಿವರ ಸಲ್ಲಿಸಿದ ಎಸ್.ಬಿ.ಐ.

ನವದೆಹಲಿ, ಮಾ. 13 – ಚುನಾವಣಾ ಬಾಂಡ್‌ಗಳ ವಿವರಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚುನಾವಣಾ ಆಯೋಗಕ್ಕೆ ಸಲ್ಲಿಸಿದೆ. ಸುಪ್ರೀಂ ಕೋರ್ಟ್ ಚಾಟಿ ಬೀಸಿದ ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಕ್ರಮ ತೆಗೆದುಕೊಂಡಿದೆ.

ಮಾರ್ಚ್ 12ರಂದು ವಹಿವಾಟಿನ ಅವಧಿ ಮುಗಿಯುವುದರ ಒಳಗೆ ಚುನಾವಣಾ ಬಾಂಡ್‌ಗಳ ವಿವರಗಳನ್ನು ಸಲ್ಲಿಸುವಂತೆ ಎಸ್.ಬಿ.ಐ.ಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು.

ಬ್ಯಾಂಕ್ ಮಾರ್ಚ್ 15ರ ಸಂಜೆ 5 ಗಂಟೆ ಒಳಗೆ ಬಾಂಡ್ ವಿವರಗಳನ್ನು ತನ್ನ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಬೇ ಕಿದೆ. ಎಸ್.ಬಿ.ಐ. 2018ರ ನಂತರ 16,518 ಕೋಟಿ ರೂ.ಗಳ ಚುನಾವಣಾ ಬಾಂಡ್‌ಗಳನ್ನು ಬಿಡುಗಡೆ ಮಾಡಿದೆ.

ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಅನಾಮಿಕವಾಗಿ ದೇಣಿಗೆ ಸಲ್ಲಿಸಲು ಅವಕಾಶವಿತ್ತು. ಈ ಬಾಂಡ್‌ಗಳು ಸಂವಿಧಾನ ಬಾಹಿರ ಎಂದು ಸುಪ್ರೀಂ ಕೋರ್ಟ್ ಫೆಬ್ರವರಿ 15ರಂದು ತೀರ್ಪು ನೀಡಿತ್ತು.

ಚುನಾವಣಾ ಬಾಂಡ್ ವಿವರ ಬಹಿರಂಗ ಪಡಿಸಲು ಎಸ್.ಬಿ.ಐ.ಗೆ ಗಡುವು ನೀಡಿತ್ತು. ಗಡುವು ವಿಸ್ತರಿಸುವಂತೆ ಎಸ್.ಬಿ.ಐ. ಮಾಡಿಕೊಂಡ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿತ್ತು.

## ಶಾಸಕ ಸ್ಥಾನಕ್ಕೆ ಕಟ್ಟರ್ ರಾಜೀನಾಮೆ

ಚಂಡೀಘಡ, ಮಾ. 13 – ಹರಿಯಾಣದ ಮಾಜಿ ಮುಖ್ಯಮಂತ್ರಿ ಮನೋಹರ ಲಾಲ್ ಕಟ್ಟರ್ ಅವರು ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

ಕರ್ನಲ್ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಕಟ್ಟರ್, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ. ಕರ್ನಲ್ ಕ್ಷೇತ್ರದ ಬಗ್ಗೆ ನೂತನ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಗಮನ ಹರಿಸಲಿದ್ದಾರೆ ಎಂದು ಕಟ್ಟರ್ ಹೇಳಿದ್ದಾರೆ.

# ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದಲ್ಲಿ ದಲಿತರ ಸುಧಾರಣೆ ಸಾಧ್ಯ

### ಮಾದಾರ ಚನ್ನಯ್ಯ ಜಯಂತ್ಯೋತ್ಸವ, ಜನಜಾಗೃತಿ ಸಮಾವೇಶ, ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಶಾಸಕ ಬಿ.ಪಿ. ಹರೀಶ್



**ಹರಿಹರ**

ಹರಿಹರ, ಮಾ. 13- ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಪ್ರೋತ್ಸಾಹ ನೀಡಿದಾಗ ದಲಿತ ಸಮಾಜ ಸುಧಾರಣೆಯಾಗುತ್ತದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಸಿದ್ದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಮಾದಿಗ ಸಮಾಜದ ವತಿಯಿಂದ ಮಾದಾರ ಚನ್ನಯ್ಯ ಜಯಂತ್ಯೋತ್ಸವದ ಅಂಗವಾಗಿ ಜರುಗಿದ ಜನಜಾಗೃತಿ ಸಮಾವೇಶ ಹಾಗೂ ಸರಳ ಸಾಮೂಹಿಕ ವಿವಾಹ ಮಹೋತ್ಸವ ಸಮಾರಂಭ ದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದಲಿತ ಸಮಾಜದ ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಅನೇಕ ಮಹನೀಯರು ಜ್ಞಾನ ಮತ್ತು ಶಿಕ್ಷಣದಿಂದ ವಿಶ್ವಮಟ್ಟದಲ್ಲಿ ಹೆಸರು ಗಳಿಸುವುದಕ್ಕೆ, ಸಮಾಜದಲ್ಲಿ ಮುನ್ನೆಲೆಗೆ ಬರುವುದಕ್ಕೆ ಸಾಧ್ಯವಾಯಿತು. ಹಾಗಾಗಿ ದಲಿತ ಸಮಾಜದ ತಾಯಂದಿರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕೊಡುವಲ್ಲಿ ಮುಂದಾಗಬೇಕಿದೆ. ಜೊತೆಗೆ ಹಿರಿಯರು ಯುವಕರಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕು ಎಂದು ಅವರು ಕರೆ ನೀಡಿದರು.

ಸರ್ಕಾರ ಎಸ್ಸಿ-ಎಸ್ಟಿ ಸಮುದಾಯದ ಜನಕ್ಕೆ ವಿವಿಧ ಬಗೆಯ ಸೌಲಭ್ಯಗಳನ್ನು ನೀಡುತ್ತಿದ್ದು, ಅವುಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳುವಂತೆ ಹರೀಶ್ ಕಿವಿಮಾತು ಹೇಳಿದರು.

ಕೋಡಿಹಳ್ಳಿ ಮಠದ ಜಗದ್ಗುರು ಶ್ರೀ ಷಡಕ್ಷರಿ ಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ದಲಿತ ವರ್ಗದವರು ತಮ್ಮ ಜಾತಿಯವರ ಜೊತೆಗೆ, ಅನ್ಯ ಸಮಾಜದವರ ಜೊತೆಯಲ್ಲಿ ಉತ್ತಮ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋದಾಗ ಸಮಾಜವು ಹೆಚ್ಚು ಪ್ರಗತಿ ಹೊಂದುವುದಕ್ಕೆ ಸಾಧ್ಯವಿದೆ. ಸಮಾಜದಲ್ಲಿ ಶಿಸ್ತು, ಸಂಯಮ ತಾಳ್ಮೆ ಹಾಗೂ ನಡೆ ನುಡಿಗಳು ಚೆನ್ನಾಗಿ ಇರಬೇಕು ಮತ್ತು ಒಗ್ಗಟ್ಟಿನಿಂದ ಇದ್ದರೆ ಸಮಾಜಕ್ಕೆ ಶಕ್ತಿ ಹೆಚ್ಚು ಬರುತ್ತದೆ ಮತ್ತು ಬದುಕಲು ಮತ್ತು ಅನ್ನ ಮಾರ್ಗಕ್ಕೆ ಅಕ್ಷರದ ಅವಶ್ಯಕತೆ ಇರುತ್ತದೆ. ಆದರೆ ಅಕ್ಷರದ ಕೊರತೆ ದಲಿತರಲ್ಲಿ ಹೆಚ್ಚು ಇದ್ದು, ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಅಜ್ಞಾನದಿಂದ ಜ್ಞಾನದ ಕಡೆಯಲ್ಲಿ ಸಮಾಜ ಸಾಗಿದಾಗ, ಸಮಾಜದಲ್ಲಿ ಜಾಗೃತಿ ಆದಂತೆ ಆಗುತ್ತದೆ. ಸರ್ಕಾರ ದಲಿತರಿಗೆ, ಅಸ್ಪೃಶ್ಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ನೀಡುತ್ತಿದ್ದು, ಅವುಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡಾಗ ಸಮಾಜದಲ್ಲಿ ಜ್ಞಾನವಂತರ ಸಂಖ್ಯೆ ಹೆಚ್ಚಾಗುವುದಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎ. ಗೋವಿಂದ ರೆಡ್ಡಿ ಮಾತನಾಡಿ, ಜಾತಿ ಗಣತಿಯಿಂದ ಸಮಾಜ ಸುಧಾರಣೆ ತರುವುದಕ್ಕೆ ಆಗುವುದಿಲ್ಲ, ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟಾಗ ಮಾತ್ರ ಸಮಾಜ ಸುಧಾರಣೆಯಾಗುತ್ತದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ದಲಿತ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದ್ ಕುಮಾರ್ ವಹಿಸಿದ್ದರು.

ಈ ಸಂದರ್ಭದಲ್ಲಿ ಆರೋಗ್ಯ ಮಾತೆ ಚರ್ಚ್ ಫಾದರ್ ಜಾರ್ಜ್, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಛಲವಾದಿ ಸಮಾಜದ ಜಿಲ್ಲಾ ಅಧ್ಯಕ್ಷ ಎನ್. ರುದ್ರಮುನಿ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಎ.ಕೆ. ಭೂಮೇಶ್, ಸಿ.ಎನ್. ಹುಲುಗೇಶ್, ಧರ್ಮಸ್ಥಳ ಸಂಘದ ಗಣಪತಿ ಮಾಳಂಜೆ, ಕೆ. ಜಡಿಯಪ್ಪ, ಎಲ್. ಬಿ. ಹನುಮಂತಪ್ಪ, ಹನುಮಂತಪ್ಪ ದೊಡ್ಡಮನೆ, ಶ್ರೀನಿವಾಸ್, ಹೆಚ್. ಶಿವಪ್ಪ, ಪರಶುರಾಮ್ ಧೂಳೆಹೊಳೆ, ಕೊಕ್ಕನೂರು ಬಸವರಾಜಪ್ಪ, ಹನುಮಂತಪ್ಪ ಬನ್ನಿಕೋಡು, ನಾಗೇಂದ್ರಪ್ಪ ನಾಗೇನಹಳ್ಳಿ, ಪ್ರಕಾಶ್, ಚೌಡಪ್ಪ, ಎ.ಕೆ. ದಾನಪ್ಪ, ಆಲೂರು ಶಿವಕುಮಾರ್, ಭಾಗ್ಯದೇವಿ, ಅನಿತಮ್ಮ, ಈರಮ್ಮ, ಲೋಕೇಶ್, ಮಂಜುನಾಥ್, ಹಾಲೇಶಪ್ಪ, ದೀಟೂರು ನಾಗರಾಜ್, ಹಾಲಪ್ಪ ರಾಜನಹಳ್ಳಿ, ಪರಸಪ್ಪ ಗಣೇಶ್, ಹಳ್ಳಳ್ಳಿ ಹಾಲೇಶಪ್ಪ, ಹಳ್ಳಿಹಾಳ ಚಂದ್ರ ಶೇಖರ್, ಗುರುಮೂರ್ತಿ ಉಪಸ್ಥಿತರಿದ್ದರು.

## ಯರವನಾಗ್ತಿಹಳ್ಳಿ ಕ್ಯಾಂಪ್ : ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ಬ್ರಹ್ಮೋತ್ಸವ



ಲೋಕಿಕೆರೆ ರಸ್ತೆ, ಯರವ ನಾಗ್ತಿಹಳ್ಳಿ ಕ್ಯಾಂಪ್‌ನ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ದ್ವಾದಶ (12ನೇ) ವಾರ್ಷಿಕ ಬ್ರಹ್ಮೋತ್ಸವ, ಅಷ್ಟಬಂಧನ, ಮಹಾಸಂಪ್ರೋ ಕ್ಷಣ, ಪುಷ್ಕರೋತ್ಸವ ಕಾರ್ಯಕ್ರಮದ ಪ್ರಯುಕ್ತ ಇಂದು ಬೆಳಿಗ್ಗೆ ವಿಷ್ವಕ್ಸೇನ ಪೂಜೆ, ಪುಣ್ಯಾಹ ವಾಚನೆ, ಮಹಾಶಾಂತಿ ಹವನ, ಸಂತಾನ ಪ್ರಾಪ್ತಿಗಾಗಿ ಪುತ್ರ ಕಾಮೇಷ್ಠಿ ಹವನ, ಸ್ವಾಮಿಯವರಿಗೆ ಸ್ನಪನ, ಅಲಂ ಕರಣ, ನಿರಾಂಜನ ಮಂತ್ರಪುಷ್ಪಗಳು, ಸಂಜೆ 4 ಕ್ಕೆ ಶ್ರೀ ಭೂ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿಯವರ ಗ್ರಾಮೋತ್ಸವ ವನ್ನು ಗ್ರಾಮದ ರಾಜ ಬೀದಿಗಳಲ್ಲಿ ತಾಳ-ಮೇಳಗಳ ಸಮೇತ ನಡೆಸಲಾಗುವುದು. ಸಂಜೆ 6 ಕ್ಕೆ ಶ್ರೀ ಭೂಸಮೇತ ಶ್ರೀ ವೆಂಕೇಟಶ್ವರಸ್ವಾಮಿಯವರ ದಿವ್ಯ ತಿರು ಕಲ್ಯಾಣ ಮಹೋತ್ಸವವನ್ನು ಸಾಮೂಹಿಕ ವಾಗಿ ದಂಪತಿಗಳು ಕುಳಿತು ಪೂಜೆ ನೆರವೇರಿಸುವರು.

ದಿನಾಂಕ 15ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ವಿಷ್ವಕ್ಸೇನ ಪೂಜೆ, ಪುಣ್ಯಾಹ ವಾಚನೆ, ಮಹಾಶಾಂತಿ ಹವನ, ಅಷ್ಟಬಂಧನ, ಅಭಿಮಂತ್ರಣ, ನೀರಾಂಜನ ಮಂತ್ರ ಪುಷ್ಪ, ಸಂಜೆ 5 ಗಂಟೆಗೆ ವಿಷ್ವಕ್ಸೇನ ಪೂಜೆ, ಪುಣ್ಯಾಹ ವಾಚನೆ, ಮುತ್ತೈದೆಯರಿಗೆ ಸಾಮೂಹಿಕ ಕುಂಕು ಮಾರ್ಚನೆ, ನೀರಾಂಜನ ಮಂತ್ರಪುಷ್ಪ ನೆರವೇರುವುದು.

ದಿನಾಂಕ 16ರ ಶನಿವಾರ ಬೆಳಿಗ್ಗೆ 9 ಗಂಟೆಗೆ ವಿಷ್ವಕ್ಸೇನ ಪೂಜೆ, ಪುಣ್ಯಾಹ ವಾಚನೆ, ಅಷ್ಟಬಂಧನ ಮಹಾ ಪೂರ್ಣಾಹುತಿ, ಮಹಾಕುಂಭಾ ಭಿಷೇಕ, ಕಳನ್ಯಾಸ, ಗೋದರ್ಶನ, ಸುದರ್ಶನ ಮೂ ರ್ತಿಗೆ ಶ್ರೀ ಭೂ ಸಮೇತ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಗೆ ಉತ್ಸವಾಂತ ಸ್ನಪನಂ, ಚಕ್ರಸ್ನಾನ, ನೀರಾಂಜನ ಮಂತ್ಪರುಷ್ಪ, ಸಂಜೆ 5 ಕ್ಕೆ ವಿಷ್ವಕ್ಸೇನ ಪೂಜೆ, ಪುಣ್ಯಾಹ ವಾಚನೆ, ದ್ವಾದಶ ಪ್ರದಕ್ಷಿಣೆಗಳು, ಶ್ರೀ ಪುಷ್ಪ ಯಾಗೋತ್ಸವ (ಗ್ರಾಮಾಭಿವೃದ್ಧಿ) ಪೂಜೆಗಳು ನೆರವೇರಲಿವೆ. ಈ ಎಲ್ಲಾ ಬೆಳಿಗ್ಗೆ ಹಾಗೂ ಸಂಜೆಯ ಪೂಜೆಯ ನಂತರ ಪ್ರಸಾದ ವಿತರಣೆ ನಡೆಯಲಿದೆ.

## ಚುನಾವಣಾ ಆಯುಕ್ತರ ನೇಮಕ : ಸುಪ್ರೀಂ ವಿಚಾರಣೆ

ನವದೆಹಲಿ, ಮಾ. 13 – ಮುಖ್ಯ ಚುನಾವಣಾ ಆಯುಕ್ತರು ಹಾಗೂ ಆಯುಕ್ತರ ನೇಮಕದ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯನ್ನು ಹೊರಗಿಟ್ಟಿರುವ ಬಗ್ಗೆ ಸರ್ಕಾರೇತರ ಸಂಘಟನೆಯೊಂದು ದಾಖಲಿಸಿರುವ ಅರ್ಜಿಯ ಬಗ್ಗೆ ಸುಪ್ರೀಂ ಕೋರ್ಟ್ ಮಾರ್ಚ್ 15ರಂದು ವಿಚಾರಣೆ ನಡೆಸಲಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ಅರ್ಜಿ ದಾಖಲಿಸಿದ್ದು, ಈ ಬಗ್ಗೆ ನ್ಯಾಯಮೂರ್ತಿ ಸಂಜೀವ್ ಖನ್ನ ಅವರ ನೇತೃತ್ವದ ಪೀಠ ವಿಚಾರಣೆ ನಡೆಸಲಿದೆ.

## ಅಸ್ಸಾಂ ಸೆಮಿಕಂಡಕ್ಟರ್ ಜೋಡಣಾ ಘಟಕಕ್ಕೆ ಚಾಲನೆ

ಗುವಾಹತಿ, ಮಾ. 13 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವರ್ಚುಯಲ್ ಮೂಲಕ 27 ಸಾವಿರ ಕೋಟಿ ರೂ.ಗಳ ಸೆಮಿಕಂಡಕ್ಟರ್ ಜೋಡಣೆ ಹಾಗೂ ಪರೀಕ್ಷಾ ಘಟಕಕ್ಕೆ ಚಾಲನೆ ನೀಡಿದ್ದಾರೆ. ಅಸ್ಸಾಂನ ಮಾರಿಗಾಂವ್ ಜಿಲ್ಲೆಯ ಜಗಿರೋಡ್‌ನಲ್ಲಿ ಈ ಘಟಕ ಸ್ಥಾಪನೆಯಾಗಲಿದೆ.

ಇದೇ ವೇಳೆ ಪ್ರಧಾನಿ ಮೋದಿ ಅವರು ಗುಜರಾತ್‌ನ 2 ಸೆಮಿಕಂಡಕ್ಟರ್ ಘಟಕಗಳಿಗೂ ಶಿಲಾನ್ಯಾಸ ನೆರವೇರಿಸಿದ್ದಾರೆ.

ಟಾಟಾ ಸೆಮಿಕಂಡಕ್ಟರ್ ಜೋಡಣೆ ಹಾಗೂ ಪರೀಕ್ಷಾ ಘಟಕದ ಉದ್ಘಾಟನೆ ನಂತರ ಮಾತನಾಡಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ, ಇದೇ ಮೊದಲ ಬಾರಿಗೆ ಅಸ್ಸಾಂ ಹಾಗೂ ಈಶಾನ್ಯದಲ್ಲಿ 27 ಸಾವಿರ ಕೋಟಿ ರೂ.ಗಳ ಹೂಡಿಕೆ ಬಂದಿದೆ ಎಂದಿದ್ದಾರೆ.

## ಜಿಲ್ಲಾಸ್ಪತ್ರೆಯಲ್ಲಿ ಕುಸಿದು ಬಿದ್ದ ಮೇಲ್ಛಾವಣಿ ಸಿಮೆಂಟ್



ದಾವಣಗೆರೆ, ಮಾ, 13- ಚಿಗಟೇರಿ ಜಿಲ್ಲಾಸ್ಪತ್ರೆಯ ಮೇಲ್ಛಾವಣಿಯ ಸಿಮೆಂಟ್ ಬೆಡ್ ಮೇಲೆ ಬಿದ್ದು, ರೋಗಿಗಳು ಆತಂಕದಿಂದ ಓಡಿದ ಘಟನೆ ಬುಧವಾರ ನಡೆದಿದೆ.

ಜಿಲ್ಲಾಸ್ಪತ್ರೆಯ ವಾರ್ಡ್ ಸಂಖ್ಯೆ 71-72ರಲ್ಲಿ ಮೇಲ್ಛಾವಣಿಯ ಸಿಮೆಂಟ್ ಕುಸಿದು ಬಿದ್ದಿದೆ. ಅದೃಷ್ಟ ವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಜಿಲ್ಲಾಸ್ಪತ್ರೆಯ ಅವ್ಯವಸ್ಥೆ ಬಗ್ಗೆ ರೋಗಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಆಮಿಷ ಮುಕ್ತ ಚುನಾವಣೆಯತ್ತ ಆಯೋಗದ ಹೆಜ್ಜೆ

ಬೆಂಗಳೂರು, ಮಾ. 13 – ಮುಂಬರುವ ಲೋಕಸಭಾ ಚುನಾವಣೆ ಯನ್ನು ಆಮಿಷ ಮುಕ್ತವಾಗಿ ನಡೆಸಲು ಹೆಚ್ಚಿನ ಗಮನ ಹರಿಸಲಾಗುವುದು. ತಾರಾ ಪ್ರಚಾರಕರ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲಾಗುವುದು ಹಾಗೂ ಚುನಾವಣೆ ಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಇರುವಂತೆ ನೋಡಿಕೊಳ್ಳಲಾಗುವುದು ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ ಹೇಳಿದ್ದಾರೆ.

ದಕ್ಷಿಣದ ರಾಜ್ಯಗಳಲ್ಲಿ ತೋಳ್ಬಲಕ್ಕಿಂತ ಹಣ ಬಲದ ಪ್ರಭಾವ ಹೆಚ್ಚಾಗಿ ಕಂಡು ಬರುತ್ತಿದೆ. ಆಮಿಷ ಮುಕ್ತ ಹಾಗೂ ನ್ಯಾಯೋಚಿತ ಚುನಾವಣೆ ನಡೆಸುವುದು ನಮ್ಮ ಗುರಿಯಾಗಿದೆ ಎಂದು ಖಾಸಗಿ ಸುದ್ದಿಸಂಸ್ಥೆ ಯೊಂದಕ್ಕೆ ಸಂದರ್ಶನ ನೀಡಿದ್ದ ಮೀನಾ ಹೇಳಿದ್ದಾರೆ.

ಕೇಂದ್ರ ಹಾಗೂ ರಾಜ್ಯಗಳಿಂದ 14 ಚುನಾವಣಾ ಸಂಬಂಧಿ ನಿಯಮಗಳ ಜಾರಿ ಸಂಸ್ಥೆಗಳಿವೆ. ಚುನಾವಣೆಯ ಮೇಲೆ ಹದ್ದಿನ ಕಣ್ಣಿರಿಸಲಾಗುವುದು ಎಂದವರು ತಿಳಿಸಿದ್ದಾರೆ.

ಆರು ತಿಂಗಳ ಹಿಂದೆಯೇ ನಾವು ಚುನಾವಣಾ ಸಿದ್ಧತೆ ಆರಂಭಿಸಿದ್ದೇವೆ. ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ, ಸುಂಕ, ಕಂದಾಯ ಗುಪ್ತಚರ, ಅಬಕಾರಿ ಸೇರಿದಂತೆ ಎಲ್ಲರೂ ನಿಗಾ ವಹಿಸಿದ್ದೇವೆ. ಹಣ, ಮಾದಕ ಹಾಗೂ ಮದ್ಯ ಹರಿಯುವ ತಾಣಗಳ ಮೇಲೆ ಕಣ್ಣಿರಿಸಿದ್ದೇವೆ. ರಾಜಕೀಯ ಪಕ್ಷಗಳ ಮೇಲೆ ಮುಂಚಿತವಾಗಿಯೇ ನಿಗಾ ವಹಿಸಿದ್ದೇವೆ ಎಂದವರು ಹೇಳಿದ್ದಾರೆ.

ಕಳೆದ ಹಲವು ತಿಂಗಳಿನಿಂದಲೇ 172 ಅಂತರ ರಾಜ್ಯ ಹಾಗೂ 60 ಅಬಕಾರಿ ಚೆಕ್ ಪೋಸ್ಟ್‌ಗಳ ಮೇಲೆ ನಿಗಾ ವಹಿಸಲಾಗಿದೆ. ಹಣ, ಮಾದಕ ಹಾಗೂ ಮದ್ಯಗಳು ನೆರೆ ರಾಜ್ಯದಿಂದ ಹರಿದು ಬರದಂತೆ ಗಮನಿಸುತ್ತಿದ್ದೇವೆ ಎಂದವರು ತಿಳಿಸಿದ್ದಾರೆ.

## ಕೇರಳಕ್ಕೆ ವಿಶೇಷ ಪ್ಯಾಕೇಜ್ : ಕೇಂದ್ರಕ್ಕೆ ಸುಪ್ರೀಂ ಸಲಹೆ

ನವದೆಹಲಿ, ಮಾ. 13 - ಕೇರಳ ಎದುರಿಸುತ್ತಿರುವ ಹಣಕಾಸು ವಿಷಯಗಳನ್ನು ಎದುರಿಸಲು ಮಾರ್ಚ್ 31ರ ಒಳಗೆ ಒಂದು ಸಮಯದ ಪ್ಯಾಕೇಜ್ ನೀಡುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಕೇರಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಾಲ್, ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಾದ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳಿದರು.


ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ, ಕೇಂದ್ರ ಸರ್ಕಾರ ಸ್ವಲ್ಪ ಉದಾರವಾಗಬೇಕು. ವಿಶೇಷ ಪ್ರಕರಣ ಎಂದು ಪರಿಗಣಿಸಿ ಒಂದು ಸಮಯದ ಪ್ಯಾಕೇಜ್ ನೀಡಬೇಕು ಎಂದು ತಿಳಿಸಿತು.

ಭವಿಷ್ಯದ ಬಜೆಟ್‌ಗಳಲ್ಲಿ ಕಠಿಣ ನಿಯಮಗಳನ್ನು ಹೇರಬಹುದು. ಮಾರ್ಚ್ 31ರ ಒಳಗೆ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಪೀಠ ಹೇಳಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಮಣನ್, ಕೇರಳದ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಮ್ಮ ಕೈಗಳು ಕಟ್ಟಿವೆ ಎಂದು ಹೇಳಿದರು.

ನಾವು ವಿಷಯದಲ್ಲಿ ನಾವು ಪರಿಣಿತರಲ್ಲ. ಈ ವಿಷಯವನ್ನು ಬಗೆಹರಿಸುವ ಬಗ್ಗೆ ನಾವು ಹೇಳಲಿಕ್ಕಾಗದು ಎಂದು ಪೀಠ ಪ್ರತಿಕ್ರಿಯಿಸಿತು.

## ಕೊಡದಗುಡ್ಡಕ್ಕೆ ಇಂದು ಶ್ರೀ ರಂಭಾಪುರಿ, ಶ್ರೀ ಕೇದಾರ ಜಗದ್ಗುರುಗಳು





ಜಗಳೂರು ತಾಲ್ಲೂಕು ಸುಕ್ಷೇತ್ರ ಕೊಡದ ಗುಡ್ಡದಲ್ಲಿ ಶ್ರೀ ರಂಭಾಪುರಿ-ಶ್ರೀ ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಶ್ರೀ ವೀರಭದ್ರಸ್ವಾಮಿ ವಸತಿ ಗೃಹ ಉದ್ಘಾಟನೆ, ಕರಿಗಲ್ಲು ಸ್ಥಾಪನೆ, ಕಲ್ಯಾಣ ಮಂಟಪದ ಶಂಕು ಸ್ಥಾಪನೆ, ದೇವಿಕೆರೆ ಗ್ರಾಮದಲ್ಲಿನ ಮಹಾದ್ವಾರ ಉದ್ಘಾಟನೆಯ ಅಂಗವಾಗಿ ಉಭಯ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ಹಾಗೂ ಸಂಸ್ಕೃತಿ ಜಾಗೃತಿಗಾಗಿ ಧರ್ಮ ಸಮಾರಂಭವು ಇಂದು ಜರುಗುವುದು.

ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಹಾಗೂ ಶ್ರೀ ಕೇದಾರ ಭೀಮಾಶಂಕರಲಿಂಗ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗುವ ಸಮಾರಂಭದಲ್ಲಿ ರಾಮಘಟ್ಟ ಪುರವರ್ಗ ಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಕಣ್ವ ಕುಪ್ಪೆ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾ ಚಾರ್ಯ ಸ್ವಾಮಿಗಳು, ಹೊನ್ನಾಳಿ ಹಿರೇ ಕಲ್ಮಠದ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾ ಚಾರ್ಯ ಸ್ವಾಮಿಗಳು ಹಾಗೂ ಶಿರಾಳಕೊಪ್ಪ ವಿರಕ್ತ ಮಠದ ಸಿದ್ಧೇಶ್ವರ ದೇವರು ನೇತೃತ್ವ ವಹಿಸುವರು.

**ಶ್ರೀ ವೀರಭದ್ರಸ್ವಾಮಿ ವಸತಿ ಗೃಹ ಉದ್ಘಾಟನೆ, ಕರಿಗಲ್ಲು ಸ್ಥಾಪನೆ, ಕಲ್ಯಾಣ ಮಂಟಪದ ಶಂಕುಸ್ಥಾಪನೆ**

ಮುಖ್ಯ ಅತಿಥಿಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಶಾಸಕ ಬಿ.ದೇವೇಂದ್ರಪ್ಪ, ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ದೇವೀಕೆರೆ ಜೆ. ಆರ್.ರವಿಚಂದ್ರ, ದಾವಣಗೆರೆಯ ಬಿ.ಸಿ. ಉಮಾ ಪತಿ, ಎಸ್.ಕೆ. ಶಶಿಧರ, ಕೊಗುಂಡಿ ಬಕ್ಕೇಶಪ್ಪ, ದೇವರಮನೆ ಶಿವಕುಮಾರ, ಚಿದಾನಂದಪ್ಪ, ಹೆಚ್. ಬಿ. ಮಂಜಪ್ಪ ಅನೇಕ ಗಣ್ಯರು ಭಾಗವಹಿಸುವರು.

# ಉತ್ತಮ ಸೇವೆ ಮಾಡಲು ವೈದ್ಯರಿಗೆ ಸೂಚನೆ



**ತಾಯಿ, ಶಿಶು ಮರಣ ತಡೆಗಟ್ಟಲು ಎಚ್ಚರ ವಹಿಸಲು ಜಿಲ್ಲಾಧಿಕಾರಿ ನಿರ್ದೇಶನ**

ದಾವಣಗೆರೆ, ಮಾ.13- ತಾಯಿ ಮತ್ತು ಶಿಶು ಮರಣ ತಡೆಗಟ್ಟುವ ನಿಟ್ಟಿನಲ್ಲಿ ವೈದ್ಯಾಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ. ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ತಾಯಿ ಮತ್ತು ಶಿಶು ಮರಣದ ಕುರಿತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಸೂತಿ ತಜ್ಞರು, ವೈದ್ಯರು ಪ್ರಸವಕ್ಕೆ ಗರ್ಭಿಣಿಯರು ಆಸ್ಪತ್ರೆಗೆ ದಾಖಲಾದ ವೇಳೆ ತಕ್ಷಣ ತಪಾಸಣೆ ನಡೆಸಿ, ಅವರ ಆರೋಗ್ಯದ ಸ್ಥಿತಿ, ಗಂಭೀರತೆ ಬಗ್ಗೆ ಪರಿಶೀಲಿಸಿ ಏನಾದರೂ ಇದ್ದರೆ ವಿವರವಾಗಿ ಕೇಸ್ ಶೀಟ್‌ನಲ್ಲಿ ದಾಖಲಿಸಬೇಕು ಹಾಗೂ ತಕ್ಷಣವೇ ಮುಂದಿನ ಚಿಕಿತ್ಸೆ ಕುರಿತು ಕ್ರಮ ವಹಿಸಬೇಕು ಎಂದು ಅವರು ಸೂಚಿಸಿದರು.

ಗರ್ಭಿಣಿಯಾದಾಗ ಪೌಷ್ಠಿಕ ಆಹಾರ ಸೇವನೆಗೆ ಮಾಡುವಂತೆ ಅರಿವು ಮೂಡಿಸಬೇಕು. ಗರ್ಭಿಣಿ ಸ್ತ್ರೀಯರು ಮಾತೃಪೂರ್ಣ ಯೋಜನೆಯ ಸೌಲಭ್ಯ ವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತೆ ಅಂಗನ ವಾಡಿ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಹಾಯಕಿಯರು ಗಮನಿಸಬೇಕು. ಗರ್ಭಿಣಿ ಸ್ತ್ರೀಯರನ್ನು ಹೆರಿಗೆಗೆ ಆಸ್ಪತ್ರೆಗೆ ಕರೆದುಕೊಂಡು ಬರುವಲ್ಲಿ ಆಶಾ ಕಾರ್ಯಕರ್ತೆಯರು ಕಾಳಜಿ ವಹಿಸಬೇಕು ಎಂದು ಅವರು ಕರೆ ನೀಡಿದರು.

ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಸೂತಿ ವಿಭಾಗದ ವೈದ್ಯರು ಅವರ ಕೆಲಸದಲ್ಲಿ ಹಾಜರಿದ್ದು, ತಕ್ಷಣ ಗರ್ಭಿಣಿಯರನ್ನು ಪರೀಕ್ಷಿಸಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ತಾಯಿ ಮರಣ ಪ್ರಮಾಣವನ್ನು ಕಡಿಮೆ ಮಾಡಬೇಕೆಂದರು.

ಹೆರಿಗೆ ಸಂದರ್ಭದಲ್ಲಿ ಅಗತ್ಯವಿರುವ ರಕ್ತ, ಮತ್ತಿತರ ಪೂರ್ವ ಸಿದ್ದತೆಗಳಿಗೆ ಹೆಚ್ಚಿನ ಗಮನ ಹರಿಸುವಂತೆ ವೈದ್ಯಾಧಿಕಾರಿಗಳಿಗೆ ತಿಳಿಸಿದ ಅವರು, ಗರ್ಭಿಣಿಯರು ಹೆಚ್ಚಾಗಿ ಹೆರಿಗೆ ಸಂದರ್ಭ ದಲ್ಲಿ ಅತಿಯಾದ ಬಿ.ಪಿಯಿಂದ ಮರಣ ಹೊಂದಿ ರುವ ಕಾರಣ, ಅದರ ಕಡೆ ಹೆಚ್ಚು ಗಮನವಹಿಸ ಬೇಕು. ಜಿಲ್ಲೆಯಲ್ಲಿ ಅಕ್ಟೋಬರ್-2023 ರಿಂದ ಫೆಬ್ರವರಿ-2024 ರವರೆಗೆ ತಾಯಂದಿರ ಮರಣಕ್ಕೆ ಸಂಬಂಧಿಸಿದಂತೆ 4 ಪ್ರಕರಣಗಳು ದಾಖಲಾಗಿವೆ. ತಾಯಂದಿರ ಮರಣ ಪ್ರಮಾಣ ತಪ್ಪಿಸಬೇಕು. ರೋಗಿಗಳನ್ನು ಪರೀಕ್ಷೆ ಮಾಡಿ ತಾಯಿ ಕಾರ್ಡ್‌ನಲ್ಲಿ ರೋಗಿಗೆ ನೀಡಿದ ಔಷಧಿಗಳು, ತಪಾಸಣೆ ಮಾಡಿದ ವರದಿಯನ್ನು ತಪ್ಪದೇ ಆಸ್ಪತ್ರೆಗಳಲ್ಲಿನ ವೈದ್ಯರು ನಮೂದಿಸಬೇಕು. ವೈದ್ಯರು ಹಾಗೂ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಗರ್ಭಿಣಿಯರ ಕಡೆ ಹೆಚ್ಚು ಗಮನವಹಿಸಬೇಕು.

ಆರೋಗ್ಯ ಇಲಾಖೆಯ ಆರ್.ಸಿ.ಹೆಚ್ ಅಧಿಕಾರಿ ಡಾ. ರೇಣುಕಾರಾಧ್ಯ, ಡಿಹೆಚ್ಓ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ, ತಾಲ್ಲೂಕು ಆರೋಗ್ಯಾಧಿಕಾರಿ, ಆಶಾ ಕಾರ್ಯಕರ್ತೆಯರು ಹಾಗೂ ಉಪಸ್ಥಿತರಿದ್ದರು.



# ಬಿಜೆಪಿ ಎರಡನೇ ಪಟ್ಟಿ ಬಿಡುಗಡೆ

(1ನೇ ಪುಟದಿಂದ) ಪ್ರಹ್ಲಾದ್ ಜೋಶಿ ಅವರನ್ನು ಧಾರವಾಡದಿಂದ ಕಣಕ್ಕಿಳಿಸಿದರೆ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಹಾವೇರಿಯಿಂದ ಸ್ಪರ್ಧೆಗಿಳಿಸಿದೆ.

ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಕೋಟಾ ಶ್ರೀನಿವಾಸಪೂಜಾರಿ ಅವರಿಗೆ ಉಡುಪಿ-ಚಿಕ್ಕಮಗಳೂರು, ಪಕ್ಷದ ಕೆಲವರ ವಿರೋಧಕ್ಕೂ ಮಣಿಯದೇ ಮಾಜಿ ಸಚಿವ ವಿ.ಸೋಮಣ್ಣ ಅವರಿಗೆ ತುಮಕೂರು ಟಿಕೆಟ್ ನೀಡಲಾಗಿದೆ.

ದಾವಣಗೆರೆಯಿಂದ ಸಂಸದ ಜಿ.ಎಂ.ಸಿದ್ದೇಶ್ವರ್ ಬದಲು ಅವರ ಪತ್ನಿ ಗಾಯಿತ್ರಿ ಸಿದ್ದೇಶ್ವರ ಅವರಿಗೆ ಅವಕಾಶ ಕಲ್ಪಿಸಿದೆ.

ಉಳಿದಂತೆ ಮಾಜಿ ಮುಖ್ಯಮಂತ್ರ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ ಅವರಿಗೆ ಶಿವಮೊಗ್ಗ, ಚಿಕ್ಕೋಡಿಯಿಂದ ಅಣ್ಣಾ ಸಾಹೇಬ್ ಶಂಕರ್ ಜೊಲ್ಲೆ, ಬಾಗಲಕೋಟೆಯಿಂದ ಪಿ.ಸಿ.ಗದ್ದಿಗೌಡರ್, ಬಿಜಾಪುರದಿಂದ ರಮೇಶ್ ಜಿಗಜಿಣಗಿ, ಗುಲ್ಬರ್ಗಾದಿಂದ ಡಾ.ಉಮೇಶ್ ಜಿ. ಜಾದವ್, ಬೀದರ್ ನಿಂದ ಕೇಂದ್ರ ಸಚಿವ ಭಗವಂತ್ ಖೂಬಾ, ಬೆಂಗಳೂರು ಸೆಂಟ್ರಲ್ ನಿಂದ ಪಿ.ಸಿ. ಮೋಹನ್, ಬೆಂಗಳೂರು ದಕ್ಷಿಣದಿಂದ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ನೀಡಿ ಮರು ಸ್ಪರ್ಧೆಗೆ ಅವಕಾಶ ನೀಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದ ನಳಿನ್ ಕುಮಾರ್ ಕಟೀಲ್ ಗೆ ಟಿಕೆಟ್ ನಿರಾಕರಿಸಿದ್ದು, ಅವರು ಪ್ರತಿನಿಧಿಸುತ್ತಿದ್ದ ದಕ್ಷಿಣ ಕನ್ನಡ ಕ್ಷೇತ್ರಕ್ಕೆ ಮಾಜಿ ಯೋಧ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರಿಗೆ ನೀಡಲಾಗಿದೆ. ಇನ್ನೂ ಕೊಪ್ಪಳದಿಂದ ಕರಡಿ ಸಂಗಣ್ಣ ಅವರಿಗೆ ಟಿಕೆಟ್ ತಪ್ಪಿಸಿ, ಡಾ. ಬಸವರಾಜ್ ಕ್ಯಾವಟೂರು ಅವರಿಗೆ ಟಿಕೆಟ್ ನೀಡಲಾಗಿದೆ. ಬಳ್ಳಾರಿಯಿಂದ ದೇವೇಂದ್ರಪ್ಪ ಅವರ ಬದಲಿಗೆ ಮಾಜಿ ಸಚಿವ ಬಿ.ಶ್ರೀರಾಮುಲು ಅವರಿಗೆ ಅವಕಾಶ ನೀಡಿದೆ.

ಕರ್ನಾಟಕದ 28 ಕ್ಷೇತ್ರಗಳಲ್ಲಿ ಎನ್ ಡಿಎ ಮೈತ್ರಿಕೂಟದ ಜೆಡಿಎಸ್ ಗೆ ಹಾಸನ, ಮಂಡ್ಯ, ಕೋಲಾರ ಬಿಟ್ಟುಕೊಟ್ಟಿದ್ದು, ಉಳಿದ 5 ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಕಗ್ಗಂಟ್ಟಾಗಿದೆ. ರಾಜ್ಯದ ನಾಯಕರೊಂದಿಗೆ ಕೇಂದ್ರದ ಬಿಜೆಪಿ ನಾಯಕರು ಮತ್ತೊಂದು ಸುತ್ತಿನ ಮಾತುಕತೆ ನಡೆಸಿ ಉಳಿದ ಕ್ಷೇತ್ರಗಳ ಪಟ್ಟಿ ಬಿಡುಗಡೆ ಮಾಡಲಿದೆ.

ಮೈಸೂರು, ಚಾಮರಾಜನಗರ, ದಾವಣಗೆರೆ, ಕೊಪ್ಪಳ, ಬಳ್ಳಾರಿ, ಬೆಂಗಳೂರು ಉತ್ತರ, ಚಿಕ್ಕಮಗಳೂರು-ಉಡುಪಿ, ದಕ್ಷಿಣ ಕನ್ನಡ, ತುಮಕೂರು, ಹಾವೇರಿ ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಟಿಕೆಟ್ ನೀಡಲಾಗಿದೆ.

ಹೃದಯ ತಜ್ಞ ಡಾ. ಮಂಜುನಾಥ್, ಡಾ. ಬಸವರಾಜ್ ಅವರು ಅಧಿಕೃತ ಬಿಜೆಪಿ ಸದಸ್ಯರಲ್ಲ. ಆದರೂ ಅವರಿಗೂ ಪಕ್ಷ ಸೇರುವ ಮುನ್ನವೇ ಟಿಕೆಟ್ ಘೋಷಣೆ ಮಾಡಲಾಗಿದೆ.

## ಪತ್ನಿಗೆ ಟಿಕೆಟ್: ಸಂಸದ ಸಿದ್ದೇಶ್ವರ ಸಂತಸ

ದಾವಣಗೆರೆ, ಮಾ.13- ಲೋಕಸಭಾ ಚುನಾವಣೆ ಸ್ಪರ್ಧೆಗೆ ನಮ್ಮ ಮನೆಯವರಿಗೆ ಟಿಕೆಟ್ ಸಿಕ್ಕಿರುವುದು ಸಂತೋಷ ತಂದಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನನ್ನ ಮನೆತನದವರಿಗೆ ಟಿಕೆಟ್ ನೀಡುವಂತೆ ಕೇಳಿದ್ದೆ. ಹಾಗಾಗಿ, ನನ್ನ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಟಿಕೆಟ್ ಘೋಷಿಸಲಾಗಿದೆ ಎಂದರು.

ನಾನು ನಾಲ್ಕು ಬಾರಿ ಸಂಸದನಾಗಿದ್ದೇನೆ. ನನ್ನ ಪತ್ನಿಯೂ ಕಳೆದ ಮೂರು ಚುನಾವಣೆಗಳಲ್ಲಿ ನನ್ನ ಜೊತೆ ಇದ್ದು ಪಕ್ಷದ ಪರ ಕೆಲಸ ಮಾಡಿದ್ದಾರೆ. ಮುಖಂಡರು ಸಮೀಕ್ಷೆ ನಡೆಸಿ, ಯಾರು ಸೂಕ್ತ ಎಂದು ನಿರ್ಧಾರಿಸಿ ಟಿಕೆಟ್ ನೀಡಿದ್ದಾರೆ ಎಂದರು.

ರೇಣುಕಾಚಾರ್ಯ ಅವರ ಅಪಸ್ವರದ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದೇಶ್ವರ್, ಮನೆ ಎಂದ ಮೇಲೆ ಗೊಂದಲಗಳು ಇದ್ದೇ ಇರುತ್ತವೆ. ಎಲ್ಲವೂ ನಿವಾರಣೆ ಯಾಗಲಿವೆ. ಈ ಬಾರಿಯೂ ಬಿಜೆಪಿ ಗೆಲ್ಲಲಿದೆ ಎಂದರು.

ಟಿಕೆಟ್ ಘೋಷಣೆಯಾದ ಹಿನ್ನೆಲೆಯಲ್ಲಿ ರಾಜ್ಯ ಹಾಗೂ ಕೇಂದ್ರದ ಮುಖಂಡರಿಗೆ ಧನ್ಯವಾದ ಅರ್ಪಿಸುವುದಾಗಿಯೂ ಸಿದ್ದೇಶ್ವರ್ ಹೇಳಿದರು.

| ಬಿಜೆಪಿ ಅಭ್ಯರ್ಥಿಗಳ ಪಟ್ಟಿ |
|---|
| ಚಿಕ್ಕೋಡಿ - ಅಣ್ಣಾ ಸಾಹೇಬ್ ಜೊಲ್ಲೆ |
| ಬಾಗಲಕೋಟೆ - ಪಿ.ಸಿ.ಗದ್ದಿಗೌಡರ್ |
| ವಿಜಯಪುರ - ರಮೇಶ್ ಜಿಗಜಿಣಗಿ |
| ಕಲಬುರಗಿ -ಡಾ.ಉಮೇಶ್ ಜಾಧವ್ |
| ಬೀದರ್ -ಭಗವಂತ ಖೂಬಾ |
| ಕೊಪ್ಪಳ -ಡಾ.ಬಸವರಾಜ ಕ್ಯಾವಟರ್ |
| ಬಳ್ಳಾರಿ -ಬಿ. ಶ್ರೀರಾಮುಲು |
| ಹಾವೇರಿ -ಬಸವರಾಜ ಬೊಮ್ಮಾಯಿ |
| ಧಾರವಾಡ -ಪ್ರಹ್ಲಾದ್ ಜೋಶಿ |
| ದಾವಣಗೆರೆ -ಗಾಯತ್ರಿ ಸಿದ್ದೇಶ್ವರ |
| ಶಿವಮೊಗ್ಗ – ಬಿ.ವೈ. ರಾಘುವೇಂದ್ರ |
| ಉಡುಪಿ ಚಿಕ್ಕಮಗಳೂರು-ಕೋಟ ಶ್ರೀನಿವಾಸ ಪೂಜಾರಿ |
| ದಕ್ಷಿಣ ಕನ್ನಡ -ಕ್ಯಾಪ್ಟನ್ ಬ್ರಿಜೇಶ್ ಚೌಟಾ |
| ತುಮಕೂರು -ವಿ.ಸೋಮಣ್ಣ |
| ಮೈಸೂರು - ಯದುವೀರ ಕೃಷ್ಣದತ್ತ ಒಡೆಯರ್ |
| ಚಾಮರಾಜನಗರ -ಎಸ್.ಬಾಲರಾಜು |
| ಬೆಂಗಳೂರು ಗ್ರಾಮಾಂತರ-ಡಾ.ಸಿ.ಎನ್.ಮಂಜುನಾಥ |
| ಬೆಂಗಳೂರು ಉತ್ತರ -ಶೋಭಾ ಕರಂದ್ಲಾಜೆ |
| ಬೆಂಗಳೂರು ದಕ್ಷಿಣ -ತೇಜಸ್ವಿ ಸೂರ್ಯ |
| ಬೆಂಗಳೂರು ಕೇಂದ್ರ -ಪಿ.ಸಿ.ಮೋಹನ್ |

# ಕಾಂಗ್ರೆಸ್ ಗೆದ್ದರೆ ಮಹಿಳೆಯರಿಗೆ ವರ್ಷಕ್ಕೆ ಲಕ್ಷ ರೂ.

(1ನೇ ಪುಟದಿಂದ) ಸರ್ಕಾರದಿಂದ ನೀಡಲಾಗುತ್ತಿರುವ ಬಜೆಟ್ ಅನುದಾನವನ್ನು ಎರಡು ಪಟ್ಟು ಹೆಚ್ಚಿಸಲಾಗುವುದು ಎಂದೂ ಅವರು ತಿಳಿಸಿದರು.

ಮಹಿಳೆಯರಿಗೆ ಅವರ ಹಕ್ಕುಗಳ ಬಗ್ಗೆ ತಿಳಿಸಲು ಹಾಗೂ ಅವರ ಪ್ರಕರಣಗಳಲ್ಲಿ ಹೋರಾಟ ನಡೆಸಲು ನೋಡಲ್ ಅಧಿಕಾರಿಯನ್ನು ನೇಮಿಸಲಾಗುವುದು ಎಂದೂ ಅವರು ಹೇಳಿದರು.

ದೇಶದ ಪ್ರತಿ ಜಿಲ್ಲೆಯಲ್ಲೂ ಸಾವಿತ್ರಿಭಾಯಿ ಫುಲೆ ಹಾಸ್ಟೆಲ್‌ಗಳನ್ನು ಸ್ಥಾಪಿಸಲಾಗುವುದು ಎಂದವರು ಐದು ಗ್ಯಾರಂಟಿಗಳನ್ನು ವಿವರಿಸಿದ್ದಾರೆ.

# ಶಿಸ್ತು ಪರಿಪಾಲನೆ, ಕಠಿಣ ಶ್ರಮದಿಂದ ಯಶಸ್ಸು ಸಾಧ್ಯ




## ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಕಾರ್ಯಕ್ರಮದಲ್ಲಿ ವಿಟಿಯು ಕುಲಪತಿ ಡಾ. ಎಸ್. ವಿದ್ಯಾಶಂಕರ

ದಾವಣಗೆರೆ, ಮಾ. 13- ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಪರಿಪಾಲನೆಯ ಜೊತೆಗೆ ಕಠಿಣ ಪರಿಶ್ರಮದೊಂದಿಗೆ ಕಾರ್ಯ ನಿರ್ವಹಿಸಿದಲ್ಲಿ ಯಶಸ್ಸು ಕಾಣಲು ಸಾಧ್ಯವೆಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ವಿದ್ಯಾಶಂಕರ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ವಿಶ್ವವಿದ್ಯಾಲಯ ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಿನ್ನೆ ಏರ್ಪಾಡಾಗಿದ್ದ ಕಾಲೇಜಿನ ವಿದ್ಯಾರ್ಥಿ ಸಂಘದ ಶೈಕ್ಷಣಿಕ ವರ್ಷದ ಕಾರ್ಯಕಲಾಪಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉನ್ನತ ಹಾಗೂ ಗುಣ ಮಟ್ಟದ ಶಿಕ್ಷಣದ ಅವಶ್ಯಕತೆ ಇದ್ದು, ಇದಕ್ಕೆ ಅನುಗುಣವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿಶ್ವವಿದ್ಯಾಲಯ ದಿಂದ 6 ಸ್ಕಿಲ್ ಡೆವಲೆಪ್‌ಮೆಂಟ್ ಲ್ಯಾಬ್‌ಗಳನ್ನು ಪ್ರಾರಂಭಿಸಲಾಗಿದ್ದು, ಇವುಗಳ ಸದುಪಯೋಗ ಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಹತ್ತು ಹಲವಾರು ಉಪಯುಕ್ತ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದಿದ್ದು, ವಿದ್ಯಾರ್ಥಿಗಳು ಇವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಬಿ.ಇ. ರಂಗಸ್ವಾಮಿ ಅವರು ಮಾತನಾಡಿ, ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ವಿದ್ಯಾರ್ಜನೆಯ ಕಡೆಗೆ ಮನಸ್ಸು ಮಾಡಿ ಕಾರ್ಯಪ್ರವೃತ್ತರಾದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಫಲಿತಾಂಶ ಪಡೆಯಲು ಸಾಧ್ಯವೆಂದು ಕಿವಿಮಾತು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಕಾಡೆಮಿಕ್ ಸೆನೆಟ್ ಸದಸ್ಯ ಡಾ. ಡಿ. ಅಬ್ದುಲ್ ಬುಡೇನ್ ವಿದ್ಯಾರ್ಥಿಗಳ ಕುರಿತು ಮಾತನಾಡಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವ ವಿಕಸನವಾಗುವುದರ ಜೊತೆಗೆ ಜೀವನದಲ್ಲಿ ಉತ್ತಮ ಮೌಲ್ಯ ಅಳವಡಿಸಿಕೊಳ್ಳಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪ್ರಾಧ್ಯಾಪಕರು ಮತ್ತು ಡೀನ್ ಡಾ. ಎಸ್. ಮಂಜಪ್ಪ ಮಾತನಾಡಿ, ಬರುವ ದಿನಗಳಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾಗುವ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಗೆ, ಯತ್ನಿಕ್ ಡೇ, ಚೈತ್ರ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಡಿ. ಪಿ. ನಾಗರಾಜಪ್ಪ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ನಾಯಕತ್ವದ ಗುಣಗಳನ್ನು ಹೊಂದಬೇಕಾದರೆ ನಂಬಿಕೆ, ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪದ ಕಡೆಗೆ ಗಮನಹರಿಸಬೇಕೆಂದು ನುಡಿದರು.

ಕಾರ್ಯಕ್ರಮದಲ್ಲಿ ಡೀನ್‌ಗಳಾದ ಡಾ. ಟಿ. ಡಿ. ವಿಷ್ಣುಮೂರ್ತಿ (ಆಡಳಿತ), ಡಾ. ಈರಪ್ಪ ಸೊಗಲದ (ಶೈಕ್ಷಣಿಕ), ಡಾ. ಮಂಜಾನಾಯ್ಕ್ ಎನ್. (ಸ್ಟೂಡೆಂಟ್ ವೆಲ್ಫೇರ್), ಡಾ. ಕೆ. ಮಂಜುನಾಥ್ (ಐ ಅಂಡ್ ಡಿ), ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾದ ಡಾ. ಕೆ. ಎಸ್. ಅಪ್ರಮೇಯ, ಡಾ. ಮಲ್ಲಿಕಾರ್ಜುನ ಎಸ್. ಹೊಳಿ, ಡಾ. ಎಸ್. ಬಿ. ಮಲ್ಲೂರ್, ಡಾ. ಎನ್. ನಾಗೇಶ್ ಡಾ. ಎಸ್. ಬಸವರಾಜಪ್ಪ ಮತ್ತು ಪ್ರೊ. ಎಂ. ಹೆಚ್. ದಿವಾಕರ್ ಉಪಸ್ಥಿತರಿದ್ದರು.

# ಜಾತ್ರೆಗೆ ಚುನಾವಣಾ ನೀತಿ ಚೌಕಟ್ಟು ಸಾಧ್ಯತೆ : ಎಸ್ಪಿ ಉಮಾ ಪ್ರಶಾಂತ್

(1ನೇ ಪುಟದಿಂದ) ಪಡೆಯಬೇಕಿದೆ. ಇದಕ್ಕಾಗಿ ಏಕಗವಾಕ್ಷಿ ವ್ಯವಸ್ಥೆ ಮಾಡಲಾಗುವುದು. ಇದೆಲ್ಲದಕ್ಕೂ ಮಾನಸಿಕವಾಗಿ ಸಿದ್ಧವಾಗಿರಬೇಕು ಎಂದು ಎಸ್ಪಿ ಹೇಳಿದರು.

ಜಾತ್ರೆ ಹಾಗೂ ಹಬ್ಬಗಳ ಆಚರಣೆ ವೇಳೆ ಎಲ್ಲರೂ ಕಾನೂನು ಪಾಲಿಸಿ ಪೊಲೀಸರಿಗೆ ಸಹಕಾರ ನೀಡಬೇಕು. ಕಿಡಿಗೇಡಿಗಳು ಹಾಗೂ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದು ಕೊಳ್ಳಲಾಗುವುದು ಎಂದವರು ಎಚ್ಚರಿಸಿದರು.

ಸಾಮಾಜಿಕ ಮಾಧ್ಯಮಗಳ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ. ಪ್ರಚೋದನಕಾರಿ ಪೋಸ್ಟ್ ಹಾಕುವವರು ಹಾಗೂ ಫೇಕ್ ನ್ಯೂಸ್ ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗು ವುದು ಎಂದು ಉಮಾ ಪ್ರಶಾಂತ್ ಹೇಳಿದರು.

ಅಬಕಾರಿ ಇಲಾಖೆಯ ಜೊತೆ ಮಾತನಾಡಿ ದುರ್ಗಾಂಬಿಕ ಜಾತ್ರೆಯ ವೇಳೆ ಪಾನ ನಿಷೇಧದ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುವುದು. ದುರ್ಗಾಂಬಿಕಾ ಜಾತ್ರೆ ವೇಳೆ ಪ್ರಾಣಿ ಬಲಿ ಹಾಗೂ ಮೌಢ್ಯಾಚರಣೆ ಕಂಡು ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

ಜಾತ್ರೆಯ ವೇಳೆ ಸಂಚಾರ ನಿಯಂತ್ರಣಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಎಲ್ಲ ಸಂಚಾರ ನಿರ್ಬಂಧ ಕ್ರಮಗಳನ್ನು ಸಾರ್ವಜನಿಕರು ಪಾಲಿಸಬೇಕು ಎಂದು ತಿಳಿಸಿದರು.

ಓಕುಳಿ ಹಬ್ಬದ ಸಂದರ್ಭದಲ್ಲೂ ಸರ್ಕಾರದ ನಿಯಮಗಳನ್ನು ಪಾಲಿಸಬೇಕು. ಧ್ವನಿವರ್ಧಕಗಳಿಗೆ ಅನುಮತಿ ಪಡೆಯಬೇಕು. ಕಿಡಿಗೇಡಿತನ, ಬೇಜವಾಬ್ದಾರಿ ವಾಹನ ಚಾಲನೆ, ಪಾನಮತ್ತವಾಗಿ ವಾಹನ ಚಲಾಯಿಸುವುದು, ಕರ್ಕಶ ಧ್ವನಿಯ ವಾಹನ ಚಾಲನೆಗೆ ಅವಕಾಶ ಇರುವುದಿಲ್ಲ ಎಂದು ಎಸ್ಪಿ ಹೇಳಿದರು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರೀನ್ ಭಾನು ಎಸ್.ಬಳ್ಳಾರಿ ಮಾತನಾಡಿ, ಹಬ್ಬಗಳ ವೇಳೆ ಸ್ವಚ್ಛತೆ ಕಾಪಾಡಿಕೊಳ್ಳಲಾಗುವುದು. ಜಿಲ್ಲಾ ಆರೋಗ್ಯ ಇಲಾಖೆಯಿಂದ ದುರ್ಗಾಂಬಿಕಾ ಜಾತ್ರೆ ಸ್ಥಳದಲ್ಲಿ ಆರೋಗ್ಯ ತಂಡವೊಂದನ್ನು ನಿಯೋಜಿಸ ಲಾಗುವುದು.

ಪಾಲಿಕೆ ವತಿಯಿಂದ ಕುಡಿಯುವ ನೀರು ಹಾಗೂ ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ಮಾತನಾಡಿ, ದುರ್ಗಾಂಬಿಕಾ ಜಾತ್ರೆಯ ಹಿನ್ನೆಲೆಯಲ್ಲಿ ಮಹಿಳೆಯರಲ್ಲಿ ಮೌಢ್ಯದ ಬಗ್ಗೆ ಜಾಗೃತಿ ಮೂಡಿಸಲು ನಿರಂತರ ಅಭಿಯಾನ ನಡೆಸಲಾಗುತ್ತಿದೆ ಎಂದರು.

ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ, ಸಮಾಜದ ಮುಖಂಡರಾದ ಚನ್ನಬಸಪ್ಪ ಗೌಡ್ರು, ಕೆ.ಬಿ. ಶಂಕರನಾರಾಯಣ, ಬಿ.ಹೆಚ್. ವೀರಭದ್ರಪ್ಪ, ತಿಮ್ಮಣ್ಣ, ಆವರಗೆರೆ ಉಮೇಶ್, ಸೋಮಲಾಪುರದ ಹನುಮಂತಪ್ಪ, ಷಾ ನವಾಜ್ ಖಾನ್, ಜೊಳ್ಳಿ ಗುರು, ದಯಾಸಾಗರ್, ಎಲ್.ಎಂ.ಹೆಚ್. ಸಾಗರ್, ಸರ್ದಾರ್ ಚನ್ನಗಿರಿ, ಅಮಾನುಲ್ಲಾ ಖಾನ್ ಮತ್ತಿತರರು ಮಾತನಾಡಿದರು.

ವೇದಿಕೆಯ ಮೇಲೆ ಎಎಸ್‌ಪಿ ವಿಜಯ ಕುಮಾರ್ ಸಂತೋಷ್, ಜಿಲ್ಲಾ ಪಂಚಾಯ್ತಿ ಉಪ ನಿರ್ದೇಶಕ ಡಿ.ಎಸ್. ಕೃಷ್ಣ ನಾಯ್ಕ, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜ್, ಆರ್.ಟಿ.ಓ. ಪ್ರಮುತೇಶ್ ಮತ್ತಿತರರು ಉಪಸ್ಥಿತರಿದ್ದರು.

## ಜಾತ್ರೆ ಪಂಚ ವಾರ್ಷಿಕವಾಗಲಿ!

ಕಳೆದ ದುರ್ಗಾಂಬಿಕಾ ಜಾತ್ರೆಯ ವೇಳೆ ಹಲವಾರು ಬಡವರು ಪಡೆದ ಸಾಲವೇ ಇನ್ನೂ ತೀರಿಸಿಲ್ಲ. ಮತ್ತೆ ಜಾತ್ರೆ ಬಂದಿದೆ. ಇದರಿಂದ ಬಡವರಿಗೆ ಕಷ್ಟವಾಗುತ್ತಿದೆ. ಐದು ವರ್ಷಕ್ಕೊಮ್ಮೆ ಜಾತ್ರೆ ಆಚರಿಸುವುದು ಸೂಕ್ತ. ಇದಕ್ಕಾಗಿ ಜಿಲ್ಲಾಡಳಿತವೇ ನಿರ್ದೇಶನ ನೀಡಲಿ ಎಂದು ಕಾರ್ಮಿಕ ಮುಖಂಡ ಆವರಗೆರೆ ಉಮೇಶ್ ಆಗ್ರಹಿಸಿದರು.

ಇದಕ್ಕೆ ಆಕ್ಷೇಪಿಸಿದ ದುರ್ಗಾಂಬಿಕಾ ದೇವಾಲಯದ ಟ್ರಸ್ಟಿ ಬಿ.ಹೆಚ್. ವೀರಭದ್ರಪ್ಪ, ದುರ್ಗಾಂಬಿಕಾ ಜಾತ್ರೆ ಎರಡು ವರ್ಷಕ್ಕೊಂದು ಬಾರಿ ನಡೆಯಲಿದೆ. ಆರ್ಥಿಕ ಶಕ್ತಿ ಇದ್ದವರು ಆಚರಿಸಲಿ. ಬೇಡವೆನಿಸಿದವರು ಬಿಡಲಿ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಜಾತ್ರೆಗೆ ಸೂಕ್ತ ಸೌಲಭ್ಯಗಳನ್ನು ಒದಗಿಸುವುದಷ್ಟೇ ನಮ್ಮ ಜವಾಬ್ದಾರಿ. ಜಾತ್ರೆ ಯಾವಾಗ ಆಚರಿಸಬೇಕು ಎಂಬುದನ್ನು ದೇವಾಲಯದವರೇ ನಿರ್ಧರಿಸಬೇಕು ಎಂದರು.

## ಬಲಿ ನಡೆಯುವುದಿಲ್ಲ

(1ನೇ ಪುಟದಿಂದ) ಆ ರೀತಿ ಬಲಿ ನಡೆದಿರುವುದನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರು. ಈ ಬಗ್ಗೆ ಮಾತನಾಡಿದ ದೇವಾಲಯದ ಧರ್ಮದರ್ಶಿ ಬಿ.ಹೆಚ್. ವೀರಭದ್ರಪ್ಪ, ದೇವಾಲಯದಲ್ಲಿ ರಕ್ತಪಾತಕ್ಕೆ ಅವಕಾಶವೇ ಇಲ್ಲ. ಆದರೆ, ಬೇರೆಯವರು ಅವರವರ ಮನೆಯ ಮುಂದೆ ಆಹಾರದ ಉದ್ದೇಶಕ್ಕೆ ಪ್ರಾಣಿಗಳನ್ನು ಬಲಿ ಕೊಟ್ಟರೆ ಅದಕ್ಕೆ ದೇವಾಲಯದ ಸಮಿತಿ ಹೊಣೆಯಾಗುವುದಿಲ್ಲ ಎಂದರು.


**ಸೈಟ್ ಮಾರಾಟಕ್ಕೆ (KHB)**
ಹೌಸಿಂಗ್ ಬೋರ್ಡ್ 12x18 ಮೀ. (40x60) ರೆಸಿಡೆನ್ಸ್ ವೆಸ್ಟ್ 67 ಲಕ್ಷ
ಕಿರಣ್ ಬೂಸ್ನೂರ್
97315 63409, 98440 63409
ರಿಜಿಸ್ಟರ್ + ಕಮೀಷನ್ ಸೇರಿ

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳ ಮಾರಾಟಕ್ಕಿವೆ**
30x50 West, 60 ಅಡಿ ರೋಡಿಗಿದೆ, 30x40 North, 30x40 East, 30x50 West, ಪಾರ್ಕ ಎದುರುಗಡೆ ಇದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ**
P.B. ರಸ್ತೆಯಿಂದ ಒಳ ಹೋಗುವ ನೇರ ರಸ್ತೆಗೆ ( M. R. Tyre Show room ಪಕ್ಕದ ರಸ್ತೆ ) ಪೂರ್ವ ಮುಖವಾಗಿ ಇರುವ 25x88 ಅಡಿ ಅಳತೆಯ ಸೈಟು ಮಾರಾಟಕ್ಕೆ ಇದೆ. ತಕ್ಷಣ ನೋಂದಣಿಗೆ. ರೂ. 3,650/- ಪ್ರತಿ ಅಡಿಗೆ. ಸಂಪರ್ಕಿಸಿ :
Mohan Real Estate Agencies
97424 34049

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯ್ತಿಯಲ್ಲಿ ಮಾರಾಟಕ್ಕಿವೆ.
30x40,30x50,40x60
98441 24217
98458 61220

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**O.T STAFF ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್‌ನಲ್ಲಿ ಅನುಭವವುಳ್ಳ O.T Staff ಬೇಕಾಗಿದ್ದಾರೆ.
9972523910

**HOUSES FOR RENT**
1BHK, 2BHK, 3BHK, Ground floor, First floor, SS Layout, Anjaneya Layout, Siddaverappa Layout
77955 06795
Dakshith Iyanahalli

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಖಾಲಿ ಸೈಟು ಬಾಡಿಗೆಗೆ ಇದೆ**
B. I. E. T. College ರಸ್ತೆಯ ಹೇಮಾವತಿ ಹಾಸ್ಟೆಲ್ ಎದುರು ಇರುವ ಸೈಟಿನಲ್ಲಿ ಸುಮಾರು 18 ಅಡಿ ಅಗಲ, 80 ಅಡಿ ಉದ್ದ ಇರುವ ಸೈಟು ಬಾಡಿಗೆಗೆ ಇದೆ. ಸಂಪರ್ಕಿಸಿ :
97424 34049

**Security Guard ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಬಾತಿ. ಊಟದ ವ್ಯವಸ್ಥೆ ಮತ್ತು ESI, PF ಇರುತ್ತದೆ. ಸಂಪರ್ಕಿಸಿ :
97409 77785

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಮಂಡಿಪೇಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಅಥವಾ ಹುಡುಗಿಯರು ಬೇಕಾಗಿದ್ದಾರೆ.
99162 36521

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಕ್ಲೀನರ್ (ಪಾತ್ರೆ ತೊಳೆಯಲು) ಬೇಕಾಗಿದ್ದಾರೆ. ಸ್ಥಳ - ಜಯನಗರ 'ಬಿ' ಬ್ಲಾಕ್. ಸಂಪರ್ಕಿಸಿ :
97420 97140

**ಅಕೌಂಟೆಂಟ್ ಬೇಕಾಗಿದ್ದಾರೆ**
ಸುಪ್ರೀತ್ ಮೋಟಾರ್ಸ್, ಬಾಷ್ ಕಾರ್ ಸರ್ವೀಸ್, ಶಿರಮಗೊಂಡನಹಳ್ಳಿ ಹತ್ತಿರ, ಚನ್ನಗಿರಿ ರೋಡ್, ದಾವಣಗೆರೆ.
Any degree, Basic Computer Knowledge, Tally, Excel
ಅನುಭವ ಇರುವವರಿಗೆ ಆದ್ಯತೆ, ಕೆಲಸದ ಸಮಯ : 9.30 ರಿಂದ ಸಂಜೆ: 6.30
80738 47422, 96115 36299

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ ಮೂರು ಬೆಡ್ ರೂಮ್‌ನ ಡ್ಯೂಪ್ಲೆಕ್ಸ್ ಮನೆ ಹಾಗೂ ಇದಕ್ಕೆ ಹೊಂದಿಕೊಂಡಂತೆ ಸಿಂಗಲ್ ಬೆಡ್ ರೂಮ್ ಮನೆ ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
99454 92913

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು (Petrol & Diesel) ಹಾಕಲು ಪುರುಷರು ಮತ್ತು ಮಹಿಳೆಯರು ಅನುಭವವುಳ್ಳವರು ಮತ್ತು ಹೊಸದಾಗಿ ಕಲಿಯುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 94821 09492

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಮಾರಾಟಕ್ಕಿದೆ**
ಡೆಕೋರೇಷನ್ ಐಟಂಗಳು, ಬರ್ತಡೇ ಐಟಂಗಳು, ಟೇಬಲ್, ಚೇರ್‌ಗಳು, ಸೆಲ್ಫ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ
88849 55559

**ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159


# ಹೊಸ ಹುಂಡೈ ಕ್ರೆಟಾ ಎನ್ ಲೈನ್ ಬಿಡುಗಡೆ




ದಾವಣಗೆರೆ, ಮಾ. 13 - ಹುಂಡೈ ಮೋಟಾರ್ ಇಂಡಿಯಾ ಕಂಪನಿಯ ಹೊಸ 'ಹುಂಡೈ ಕ್ರೆಟಾ ಎನ್ ಲೈನ್' ಕಾರನ್ನು ನಗರದ ಕೆ.ಜೆ. ಹುಂಡೈ ಶೋ ರೂಂ ನಲ್ಲಿ ಕೆ.ಜೆ. ಹುಂಡೈ ಸಂಸ್ಥೆಯ ಅಧ್ಯಕ್ಷ ಕೆ. ಜಾವೀದ್ ಸಾಬ್ ಅವರು ಮಾರುಕಟ್ಟೆಗೆ ಪರಿಚಯಿಸಿದರು.

ಹೊಸ 'ಹುಂಡೈ ಕ್ರೆಟಾ ಎನ್ ಲೈನ್' ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಕೆ.ಜೆ. ಹುಂಡೈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಜೆ. ಅಫಕ್ ರಾಜ್ವಿ ಹುಂಡೈಕ್ರೆಟಾ ಬ್ರ್ಯಾಂಡ್‌ನ ಯಶಸ್ಸು ಮತ್ತು ಪರಂಪರೆಯ ಮೇಲೆ ಹೊಸ ವಾಹನವನ್ನು ಉತ್ಪಾದಿಸಲಾಗಿದೆ ಎಂದು ತಿಳಿಸಿದರು.

ಡ್ಯುಯಲ್-ಝೋನ್ ಕ್ಲೈಮೇಟ್ ಕಂಟ್ರೋಲ್, ವಿಹಂಗಮ ಸನ್‌ರೂಫ್, ವೆಂಟಿಲೇಟೆಡ್ ಸೀಟ್‌ಗಳು, ಸ್ಟೀರಿಂಗ್ ಮೌಂಟೆಡ್ ಕಂಟ್ರೋಲ್‌ಗಳು, ಮಲ್ಟಿ ಕಲರ್‌ಅಂಬಿಯೆಂಟ್ ಲೈಟಿಂಗ್, ಆಪಲ್ ಕಾರ್ ಪ್ಲೇ/ಅಂಡ್ರ್ಯಾಯ್ಡ್ ಆಟೋ, ಕನೆಕ್ಟೆಡ್ ಕಾರ್‌ಟೆಕ್, ವಾಯ್ಸ್ ಕಮಾಂಡ್‌ಗಳು ಸೇರಿ ಸಾಕಷ್ಟು ವೈಶಿಷ್ಟ್ಯಗಳನ್ನು ಇದು ಹೊಂದಿದೆ.

ಇನ್ನೂ ಸುರಕ್ಷತಾ ವೈಶಿಷ್ಟ್ಯಗಳಲ್ಲಿ ಆರು ಏರ್‌ಬ್ಯಾಗ್‌ಗಳು, 360 ಡಿಗ್ರಿ ಕ್ಯಾಮೆರಾ, 18 ಇಂಚಿನ ಡೈಮಂಡ್ ಕಟ್ ಅಲ್ಲೈ ವಿಲ್, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್, ಟ್ರಾಕ್ಷನ್ ಕಂಟ್ರೋಲ್ ಮತ್ತು ಟೈರ್ ಪ್ರೆಷರ್ ಮಾನಿಟರಿಂಗ್ ಸಿಸ್ಟಮ್ ಅನ್ನು ಇದು ಹೊಂದಿದೆ. ಎಕ್ಸ್ ಶೋರೂಂ ಬೆಲೆ 16.82 ಲಕ್ಷದಿಂದ ಆರಂಭಗೊಂಡು ರೂ.20.30 ಲಕ್ಷ ರೂಪಾಯಿ. ಸಮಾರಂಭದಲ್ಲಿ ಕೆ.ಜೆ. ಹುಂಡೈ ಸಂಸ್ಥೆಯ ಅಧ್ಯಕ್ಷ ಕೆ. ಜಾವೀದ್ ಸಾಬ್, ವ್ಯವಸ್ಥಾಪಕ ನಿರ್ದೇಶಕ ಕೆ.ಜೆ. ಅಫಕ್ ರಾಜ್ವಿ, ಸಂಸ್ಥೆಯ ನಿರ್ದೇಶಕ ಕೆ.ಜೆ.ಅಬ್ರಾಹರ್, ಸೆಲ್ಸ್ ಮ್ಯಾನೇಜರ್ ಹಂಜಲ್ ಹಾಗೂ ಇತರರು ಉಪಸ್ಥಿತರಿದ್ದರು.


## ಸವಿನೆನಪು



**ದಿ|| ಶ್ರೀ ನೇರ್ಲಿಗೆ ಯಲ್ಲಪ್ಪನವರು,** ಸಂಸ್ಥಾಪಕರು
**ಶ್ರೀ ರಂಗನಾಥ ಸ್ವಾಮಿ ವಿದ್ಯಾಭಿವೃದ್ಧಿ ಸಮಿತಿ (ರಿ.) ನೇರ್ಲಿಗೆ.**
ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳು ಕಳೆದರೂ ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ. ನಿಮ್ಮ ನೆನಪು ಸದಾ ನಮ್ಮ ಮನಗಳಲ್ಲಿ ಹಚ್ಚ ಹಸಿರಾಗಿದೆ. ನೀವು ಹಾಕಿಕೊಟ್ಟ ಪಥದಲ್ಲಿ ಸಾಗುತ್ತಿರುವ,
**ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು**
**ಶ್ರೀ ಜಗದ್ಗುರು ರೇಣುಕಾಚಾರ್ಯ ವಸತಿ ಪ್ರೌಢಶಾಲೆ, ದೊಡ್ಡ ಅಬ್ಬಿಗೆರೆ,** ಚನ್ನಗಿರಿ ತಾ||

## ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಕಛೇರಿ ಅಧಿಕಾರಕ್ಕೆ ಸೇರಿದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಶ್ಯಾಬನೂರು ಗ್ರಾಮದ ರಿ.ಸರ್ವೆ ನಂ. 259/IDI ಖಾತೆ ನಂ. 126 ಪೈಕಿ ನಮ್ಮ ತಂದೆಯವರಾದ ಲೇಟ್ ಚಂದ್ರಶೇಖರಪ್ಪ ಜಿ.ಕೆ. ಬಿನ್ ಪಟೇಲ್ ಕರಿಬಸಪ್ಪ ಇವರ ಹೆಸರಿಗೆ 08.05.2001ರಲ್ಲಿ ಶ್ರೀಯುತ ದಾವಣಗೆರೆ ವಾಸಿಯಾದ ಗಜೇಂದ್ರಪ್ಪ ಬಿನ್ ಮಹಾಂತಗೌಡ ಪಾಟೀಲ್ ಇವರುಗಳು ಮೇಲ್ಕಾಣಿಸಿದ ಸರ್ವೆ ನಂಬರ್‌ನಲ್ಲಿ 50x20 ಅಡಿ (ಸುಮಾರು ಒಂದು ಗುಂಟೆ ಜಮೀನು) ಅಳತೆಯ ಜಮೀನನ್ನು ಮಾರಾಟ ಮಾಡಿ, ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಆದರೆ ಆ ಸಮಯದಲ್ಲಿ ಅವರ ಹೆಸರಿಗೆ ಖಾತೆ ಆಗದೇ ಇರುವ ಕಾರಣಕ್ಕಾಗಿ ಸಮಯಾವಕಾಶ ತೆಗೆದುಕೊಂಡಿರುತ್ತಾರೆ ಮತ್ತು ಈಗ ಕೆಲವು ದಿನಗಳ ಹಿಂದೆ ಮೇಲ್ಕಾಣಿಸಿದ ಗಜೇಂದ್ರಪ್ಪ ಬಿನ್ ಮಹಾಂತಗೌಡ ಪಾಟೀಲ್ ಇವರ ಹೆಸರಿಗೆ ಖಾತೆಯಾಗಿದ್ದು, ನಮ್ಮ ತಂದೆಯವರು ದೈವಾಧೀನರಾಗಿರುವ ಕಾರಣಕ್ಕಾಗಿ ಅವರ ಏಕೈಕ ಪುತ್ರನಾದ ನಾನು ಜಮೀನನ್ನು ನಮ್ಮ ಹೆಸರಿಗೆ ಕ್ರಯ ಮಾಡಿಸಿಕೊಡಲು ನ್ಯಾಯಾಲಯದ ಮೊರೆ ಹೋಗಿರುತ್ತೇನೆ. ಈ ಬಗ್ಗೆ ಯಾರಾದರೂ ಆಕ್ಷೇಪಣೆ ಇದ್ದಲ್ಲಿ ನಮ್ಮ ಮೊ. : 9071468900 (ಭರತ್ ಜಿ.ಸಿ.) ದಿನಾಂಕ : 20.03.2024ರ ಒಳಗೆ ಸಂಪರ್ಕಿಸತಕ್ಕದ್ದು.

ನಮಗೆ ತಿಳಿಯದ ಹಾಗೆ ಈ ಮೇಲ್ಕಾಣಿಸಿದ ಜಮೀನನ್ನು ಕ್ರಯಕ್ಕೆ ಪಡೆದಲ್ಲಿ, ಪರಭಾರೆ ಮಾಡಿದಲ್ಲಿ ಅದರಿಂದ ಮುಂದೆ ಆಗುವಂತಹ ಕಾನೂನು ತೊಡಕುಗಳಿಗೆ ತಾವೇ ಜವಾಬ್ದಾರರಾಗಿರುತ್ತೀರಿ.

**ಭರತ್ ಜಿ.ಸಿ. ಬಿನ್ ಲೇಟ್ ಚಂದ್ರಶೇಖರಪ್ಪ ಜಿ.ಕೆ.**
**ಬುಳ್ಳಾಪುರ ಗ್ರಾಮ, ಶಿವಮೊಗ್ಗ-577216, ಮೊ. : 9071468900**
**ಇಮೇಲ್ : gc.bharath9@gmail.com**

**NEET/KCET CRASH COURSE**
FROM-19.03.2024
ಸಮೃದ್ಧಿ ಅಕಾಡೆಮಿ ದಾವಣಗೆರೆ.
96202 62361
81472 62361

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ACCOUNTANT REQUIRED**
Company : **Shiva Stone Crusher,** Davangere
Experience : 5-10 years
Salary - 25 k - 40 k /Month
99001 70975
97430 13305

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**SMARTCITY CABS DAVANAGERE**
Minimum 4 km - Rs 99/-
Above per km - Rs 25/-
Waiting Charges Per Hour - Rs 100/-
24 Hour Service will be available
08192 255555
94811 79933, 99868 18205
Contact For : Package, Marriage, School & College Trips
4,6,13,25,33,40,50 Seater vehicles are available (A/c & Non A/c)


## ಬ್ಯಾಂಕಿಗೆ ಕಣವಿ, ಮುಂಡಾಸ್ ನೇಮಕ

(1ನೇ ಪುಟದಿಂದ) ವೃತ್ತಿಪರ ನಿರ್ದೇಶಕರುಗಳಾಗಿದ್ದ ಮಲ್ಲಿಕಾರ್ಜುನ ಕಣವಿ ಮತ್ತು ಮುಂಡಾಸ್ ವೀರೇಂದ್ರಕುಮಾರ್ ಅವರುಗಳ ಬ್ಯಾಂಕಿಂಗ್ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ಮತ್ತೊಂದು ಅವಧಿಗೆ ವೃತ್ತಿಪರ ನಿರ್ದೇಶಕರುಗಳನ್ನಾಗಿ ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ತೀರ್ಮಾನಿಸಿತು.

ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್, ನಿರ್ದೇಶಕರುಗಳಾದ ಕೋಗುಂಡಿ ಬಕ್ಕೇಶಪ್ಪ, ಅಂದನೂರು ಮುಪ್ಪಣ್ಣ, ದೇವರಮನೆ ಶಿವಕುಮಾರ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಶ್ರೀಮತಿ ಅರ್ಚನಾ ಡಾ. ರುದ್ರಮುನಿ, ಇ.ಎಂ. ಮಂಜುನಾಥ, ಕಂಚಿಕೇರಿ ಮಹೇಶ್, ವಿ. ವಿಕ್ರಂ, ಹೆಚ್.ಎಂ. ರುದ್ರಮುನಿಸ್ವಾಮಿ, ಸೋಗಿ ಮುರುಗೇಶ್ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಪೌರತ್ವ ಕಾಯ್ದೆ ಜಾರಿ : ಚರ್ಚೆ

(1ನೇ ಪುಟದಿಂದ) ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಿಜೆಪಿಗೆ ಸೋಲಿನ ಭಯ ಕಾಡುತ್ತಿರುವುದರಿಂದ ಇಂತಹ ಗಿಮಿಕ್ಸ್‌ಗಳನ್ನು ಮಾಡುತ್ತಿದೆ, ಪೌರತ್ವ ಕಾಯ್ದೆ ಜಾರಿ ಬಗ್ಗೆ ಇಷ್ಟು ವರ್ಷ ಮೌನವಹಿಸಿ ಚುನಾವಣೆ ಹೊಸ್ತಿಲಲ್ಲಿ ಜಾರಿಗೊಳಿಸಿದ್ದಾರೆ ಎಂದರು.

ಜಯಪ್ರಕಾಶ್ ಹೆಗ್ಡೆ ಮತ್ತೊಮ್ಮೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಕರಾವಳಿ ಪ್ರದೇಶದಲ್ಲಿ ಪಕ್ಷಕ್ಕೆ ಬಲ ತುಂಬಿದಂತಾಗಿದೆ ಎಂದರು.

## ನಾಮ ಫಲಕಗಳಲ್ಲಿ ಕನ್ನಡ ಕಡ್ಡಾಯ




(1ನೇ ಪುಟದಿಂದ) ಭಾಷೆಯಲ್ಲಿ ಹಾಕಿದ್ದ ನಾಮ ಫಲಕವನ್ನು ಇಂದು ನಗರದಲ್ಲಿ ನಗರ ಸಭೆಯ ವತಿಯಿಂದ ತೆರವುಗೊಳಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯ ಇಲಾಖೆ ರವಿಪ್ರಕಾಶ್ ಸಿಬ್ಬಂದಿಗಳು ಹಾಜರಿದ್ದರು.

# ಸಚಿವರು ಇಲ್ಲವೇ ಕುಟುಂಬದವರು ಕಣಕ್ಕೆ



**ಮುಖ್ಯಮಂತ್ರಿ ತಾಕೀತು**

ಬೆಂಗಳೂರು, ಮಾ. 13 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಗಳಿಸಲು ನೀವು ಕಣಕ್ಕಿಳಿಯಿರಿ ಇಲ್ಲದಿದ್ದರೆ, ನಿಮ್ಮ ಕುಟುಂಬದವರನ್ನು ಕಣಕ್ಕಿಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಂಪುಟದ ಸಹೋದ್ಯೋಗಿಗಳಿಗೆ ತಾಕೀತು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಚಿವ ಸ್ಥಾನ ತೊರೆದು ಚುನಾವಣಾ ಕಣಕ್ಕಿಳಿಯಲು ಆಸಕ್ತಿ ತೋರದೆ ತಮ್ಮ ಕುಟುಂಬದವರನ್ನು ಗೆಲ್ಲಿಸಿಕೊಂಡು ಬರುವ ಭರವಸೆಯನ್ನು ಸಚಿವರುಗಳು ಮುಖ್ಯಮಂತ್ರಿ ಅವರಿಗೆ ನೀಡಿದ್ದಾರೆ.

ಆದರೆ, ಸಚಿವ ರಾಮಲಿಂಗಾ ರೆಡ್ಡಿ ಸಮಯಾವಕಾಶ ಕೋರಿದ್ದರೆ, ಜಾರಕಿಹೊಳಿ ಸಾರಾಸಗಟಾಗಿ ತಾವಾಗಲೀ ಅಥವಾ ತಮ್ಮ ಕುಟುಂಬದವರಾಗಲೀ ಕಣಕ್ಕಿಳಿಯುವುದಿಲ್ಲ ಎಂದು ಸಭೆಯಲ್ಲೇ ಸ್ಪಷ್ಟಪಡಿಸಿದ್ದಾರೆ. ಆದರೆ ಮುಖ್ಯಮಂತ್ರಿ ಅವರು ಪಟ್ಟು ಬಿಡದೆ, ಚುನಾವಣಾ ಪೂರ್ವ ಸಮೀಕ್ಷೆ ಹಾಗೂ ಜನಾಭಿಪ್ರಾಯವನ್ನು ಆಧಾರವಾಗಿಟ್ಟುಕೊಂಡು ನಾನು ಹೇಳುತ್ತಿದ್ದೇನೆ, ನೀವು ಇಲ್ಲವೆ ನಿಮ್ಮ ಕುಟುಂಬದವರನ್ನು ಕಣಕ್ಕಿಳಿಸುವಂತೆ ಬಿಗಿಪಟ್ಟು ಹಿಡಿದರೆಂದು ಹೇಳಲಾಗಿದೆ. ಅಲ್ಲದೇ, ಇನ್ನೂ ಕೆಲ ಸಚಿವರ ಕುಟುಂಬದವರನ್ನು ಕಣಕ್ಕಿಳಿಸಲು ಸಿದ್ದರಾಮಯ್ಯ ಸೂಚಿಸಿದ್ದಾರೆ ಎನ್ನಲಾಗಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಏಳಕ್ಕೆ ಅಭ್ಯರ್ಥಿ ಹೆಸರುಗಳನ್ನು ಪ್ರಕಟಿಸಿರುವ ಕಾಂಗ್ರೆಸ್, ಉಳಿದ 21 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಸುದೀರ್ಘ ಸಭೆ ನಡೆಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಈ ಆದೇಶ ಮಾಡಿದ್ದಾರೆ.

## ನೀಲಾನಹಳ್ಳಿಯಲ್ಲಿ ನಾಳೆ ಶ್ರೀ ಆಂಜನೇಯ ರಥೋತ್ಸವ, ಕಾರಣಿಕ



ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ ಕಾರಣಿಕವು ನಾಳೆ ಶುಕ್ರವಾರ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಇಂದು ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರು ಆಗಮಿಸುವರು ಹಾಗೂ ರಾತ್ರಿ ಅರಿಶಿಣ ಎಣ್ಣೆ ಕಾರ್ಯ ನಡೆಯುವುದು. ನಾಳೆ ಶುಕ್ರವಾರ ಬೆಳಿಗ್ಗೆ 8.30ಕ್ಕೆ ರಥೋತ್ಸವ ನಡೆಯಲಿದೆ. ಬೆಳಿಗ್ಗೆ 9.30 ರಿಂದ 1.30ರವರೆಗೆ ಭಕ್ತಾದಿಗಳು ಹರಕೆ ತೀರಿಸುವ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30ಕ್ಕೆ ಬೇಟೆ ಆಡುವುದು, ನಂತರ 5.30ಕ್ಕೆ ಮುಳ್ಳುಗದ್ದುಗೆ ಏರುವುದು, 6.30ಕ್ಕೆ ಕಾರಣಿಕ ಮತ್ತು 7.30ಕ್ಕೆ ಭೂತ ಸೇವೆ, ನಂತರ 8.30ಕ್ಕೆ ಓಕಳಿ ಕಾರ್ಯ, 9.30ಕ್ಕೆ ಗಂಗಾ ಪೂಜೆಯೊಂದಿಗೆ ರಥೋತ್ಸವ ಪೂರ್ಣಗೊಳ್ಳಲಿದೆ.

# ಭಾರತದ ಹೆಣ್ಣುಮಕ್ಕಳಿಗೆ ಪ್ರತಿ ದಿನವೂ ಮಹಿಳಾ ದಿನ



**'ವನಿತಾ ಸೇವಾ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಡಾ.ರಶ್ಮಿ ಶೆಟ್ಟಿ**

ದಾವಣಗೆರೆ, ಮಾ.13- ಭಾರತ ದೇಶದ ಹೆಣ್ಣು ಮಕ್ಕಳಿಗೆ ಪ್ರತಿ ದಿನವೂ ಮಹಿಳಾ ದಿನವೇ. ಹೀಗಾಗಿ ನಮ್ಮಲ್ಲಿ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಗತ್ಯವೇ ಇಲ್ಲ ಎಂದು ಡಾ. ರಶ್ಮಿ ಶೆಟ್ಟಿ ಅಭಿಪ್ರಾಯಿಸಿದರು.

ವನಿತಾ ಸಮಾಜದಿಂದ ಶ್ರೀ ಸತ್ಯಸಾಯಿ ಮಂದಿರದಲ್ಲಿ ಬುಧವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭದಲ್ಲಿ 'ವನಿತಾ ಸೇವಾ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

ನಾವೆಲ್ಲಾ ನವರಾತ್ರಿ ಹಬ್ಬ ಆಚರಿಸುತ್ತೇವೆ. ಕೊನೆಯ ದಿನ ವಿಜಯ ದಶಮಿ ಆಚರಿಸುತ್ತೇವೆ. ನಮ್ಮ ದೇಶದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವವಿದೆ. ಬೇರೆ ದೇಶಗಳಲ್ಲಿ ಈ ಗೌರವ ಇಲ್ಲ. ಹೀಗಾಗಿ ವಿದೇಶಿಗರಿಗೆ ಅಂತರ್ ರಾಷ್ಟ್ರೀಯ ಮಹಿಳಾ ದಿನ ಆಚರಿಸುತ್ತಾರೆ ಎಂದರು.

ಪ್ರಸ್ತುತ ದಿನಗಳಲ್ಲಿ ಭಾರತೀಯ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯವಿದೆ. ಈ ಹಿಂದೆ ಶಾಲಾ-ಕಾಲೇಜುಗಳಿಗೆ ಹೋಗುವ ಹೆಣ್ಣು ಮಕ್ಕಳಿಗೆ ತಾಯಂದಿರು 'ಎಚ್ಚರ' ಎಂದು ಹೇಳುತ್ತಿದ್ದ ಕಾಲ ಈಗ ಮರೆಯಾಗಿದೆ ಎಂದರು. ಪ್ರತಿ ಕ್ಷೇತ್ರಗಳಲ್ಲೂ ಮಹಿಳೆ ತನ್ನ ಛಾಪು ಮೂಡಿಸಿದ್ದಾಳೆ. ಎಲ್ಲಾ ಜವಾಬ್ದಾರಿಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಹೀಗಾಗಿ ಭಾರತೀಯ ಮಹಿಳೆಯರಿಗೆ ಪ್ರತಿ ದಿನವೂ ಮಹಿಳಾ ದಿನವೇ. ಪ್ರಾಯಶಃ ಈ ಮಾತಿಗೆ ಎಲ್ಲಾ ಪುರುಷರ ಸಹಮತವೂ ಇರಲಿದೆ ಎಂದರು.

ತಮ್ಮ ಸಾಧನೆಯ ಹಿಂದೆ ತಾಯಿಯ ಶ್ರಮ ನೆನೆಸಿಕೊಂಡ ಡಾ.ರಶ್ಮಿ ಅವರು, ನಂತರ ತನ್ನ ಅತ್ತೆಯ ಸಹಕಾರ ಸ್ಮರಿಸಿದರು. ದಾವಣಗೆರೆಗೆ ಬಂದಾಗ ಆರಂಭಿಕ ದಿನಗಳಲ್ಲಿ ಸಾಕಷ್ಟು ಕಷ್ಟವಾಗಿತ್ತು. ಈಗ ಇಲ್ಲಿನ ಜನರ ಪ್ರೀತಿ, ವಿಶ್ವಾಸಕ್ಕೆ ಋಣಿಯಾಗಿದ್ದೇನೆ. 'ನಾವು ಯಾರಿಂದಲೂ ಪ್ರೀತಿಯನ್ನು ನಿರೀಕ್ಷಿಸಬಾರದು. ನಾವು ಪ್ರೀತಿ ಕೊಟ್ಟರೆ, ಒಂದಲ್ಲಾ ಒಂದು ದಿನ ಅದು ದುಪ್ಪಟ್ಟಾಗಿ ಮರಳುತ್ತದೆ' ಎಂಬ ನನ್ನ ಅತ್ತೆಯ ಮಾತು ಇಂದು ನಿಜವಾಗಿದೆ ಎಂದರು.

ಹಿರಿಯ ಲೇಖಕಿ ಬಿ.ಟಿ. ಜಾಹ್ನವಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಪದ್ಮಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸುಷ್ಮ ಮೋಹನ್ ಉಪಸ್ಥಿತರಿದ್ದರು.

ರೇಖಾ ಪದಕಿ ಪ್ರಾರ್ಥಿಸಿದರು. ನಾಗತ್ನ ಜಗದೀಶ್ ಸ್ವಾಗತಿಸಿದರೆ, ಡಾ.ಅನುರಾಧ ಬಕ್ಕಪ್ಪ ಅತಿಥಿಗಳನ್ನು ಪರಿಚಯಿಸಿದರು. ಸುಜಾತ ಕೃಷ್ಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಸಂಸ್ಥೆಯ ವೆಬ್ ಸೈಟ್ ಅನಾವರಣಗೊಳಿಸಲಾಯಿತು. ಹಿರಿಯ ಸಾಹಿತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ವನಿತಾ ವಾರ್ತಾ ಬಿಡುಗಡೆ ಕಾರ್ಯಕ್ರಮ ನಡೆಸಿಕೊಟ್ಟರು. ರಮಾ ನಾಗರಾಜ್ ಕಾಸಲ್ ನಿರೂಪಿಸಿದರು. ಪ್ರಭಾ ರವೀಂದ್ರ ವಂದಿಸಿದರು.


## ನಗರದಲ್ಲಿ ಇಂದು ಗೌರವ ಸಮರ್ಪಣೆ

ಎಂಸಿಸಿ 'ಬಿ' ಬ್ಲಾಕ್‌ನ ಸ್ನೇಹ ಮಹಿಳಾ ಬಳಗದ ವತಿಯಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇಂದು ಸಂಜೆ 5 ಗಂಟೆಗೆ ಡಾ. ಸದ್ಯೋಜಾತ ಶಿವಾಚಾರ್ಯ ಹಿರೇಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಕೂಲಿ ಕೆಲಸ ಮಾಡಿ ಮಕ್ಕಳನ್ನು ಡಾಕ್ಟರ್ ಹಾಗೂ ಇಂಜಿನಿಯರ್ ಮಾಡಿರುವ ಅನ್ನಪೂರ್ಣ ಎಂಬ ಮಹಿಳೆಗೆ ಹಾಗೂ ಕುಟುಂಬ ನಿರ್ವಹಣೆಗೆ ಬೋಂಡಾ ಮಾಡಿ ಮಕ್ಕಳನ್ನು ಹಾಗೂ ಕುಟುಂಬವನ್ನು ಉತ್ತಮ ಸ್ಥಿತಿಗೆ ತಂದಿರುವ ಮಹಿಳೆಗೆ ಗೌರವ ಸಮರ್ಪಣೆ ಹಾಗೂ ಮಹಿಳೆಯರಿಗೆ ಅನೇಕ ರೀತಿಯ ರಚನಾತ್ಮಕ ಆಟಗಳನ್ನು ಏರ್ಪಡಿಸಲಾಗಿದೆ.

ವಾಸವಿ ಮಹಿಳಾ ಸಮಾಜದ ಗೌರವಾಧ್ಯಕ್ಷರಾದ ಹೇಮಾ ಶ್ರೀನಿವಾಸ್ ಅತಿಥಿಯಾಗಿ ಉಪಸ್ಥಿತರಿದ್ದು, ಸಮಾಜದಲ್ಲಿ ಮಹಿಳೆಯರ ಪಾತ್ರಗಳು ಎಂಬ ವಿಷಯದ ಬಗ್ಗೆ ಮಾತನಾಡುವರು ಎಂದು ಬಳಗದ ಗೌರವ ಅಧ್ಯಕ್ಷರಾದ ಮಂಜುಳಾ ಬಸವಲಿಂಗಪ್ಪ ತಿಳಿಸಿದ್ದಾರೆ.

# ನಾವು ಮಾಡುವ ಕರ್ಮಗಳನ್ನು ಭಗವಂತನಿಗೆ ಸಮರ್ಪಿಸಬೇಕು



**ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದಲ್ಲಿ ಉಡುಪಿ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು**

ದಾವಣಗೆರೆ, ಮಾ. 13 - ಜೀವನದಲ್ಲಿ ನಾವು ಮಾಡುವ ಕರ್ಮಗಳನ್ನು ಭಗವಂತನಿಗೆ ಸಮರ್ಪಣೆ ಮಾಡಬೇಕು ಎಂದು ಉಡುಪಿ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ಹೇಳಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯುತ್ತಿರುವ 31ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ 3ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಪಾದಂಗಳವರು ಅನುಗ್ರಹ ಸಂದೇಶ ನೀಡಿದರು.

ಕರ್ಮ ಮಾಡುವುದು ಎಷ್ಟು ಮುಖ್ಯವೋ, ಅದರ ಸಮರ್ಪಣೆಯೂ ಅಷ್ಟೇ ಮುಖ್ಯ. ದೇವರಿಗೆ ಅರ್ಪಿಸಿಬಿಟ್ಟರೆ ಅದು ಸುರಕ್ಷಿತ. ಅದಕ್ಕೆ ಬಡ್ಡಿ, ಚಕ್ರ ಬಡ್ಡಿಯನ್ನು ಹಾಕಿ ಸ್ವಾಮಿಯು ನಮಗೆ ಕೊಡಬೇಕಾಗಿದ್ದನ್ನು ಕರುಣಿಸುತ್ತಾನೆ. ಇದನ್ನು ರಾಯರು 'ಸರ್ವ ಸಮರ್ಪಣ' ಗದ್ಯದಲ್ಲಿ ವಿವರಿಸಿದ್ದಾರೆ ಎಂದು ತಿಳಿಸಿದರು.

ದೇವರು ಎಲ್ಲರಿಗೂ ಸಂಬಂಧಪಟ್ಟವ, ಆತ ಎಲ್ಲರಲ್ಲೂ ಇದ್ದಾನೆ. ದೇವರೇ ಇಲ್ಲ ಎನ್ನುವವರಿಗೆ ರಾಯರು ಉತ್ತರ ನೀಡಿದ್ದಾರೆ. ಎಚ್ಚರದಲ್ಲಿ ನಾವು ಕಂಡಿದ್ದನ್ನು ಭಗವಂತ ಸಂಗ್ರಹಿಸಿ ಇಟ್ಟಿರುತ್ತಾನೆ. ನಮ್ಮ ಕಡತಗಳು ಆತನ ಕೋರ್ಟ್‌ನಲ್ಲಿ ಕಳೆದು ಹೋಗುವ ಪ್ರಶ್ನೆ ಇಲ್ಲ ಎಂದು ಹೇಳಿದರು.

ಭಗವಂತ ಕರುಣಾಮಯಿ. ಆತನಲ್ಲಿ ಭಕ್ತಿ ಮಾಡಿದರೆ ನಮಗೆ ದಾರಿ ತೋರಿಸುತ್ತಾನೆ. ಎಚ್ಚರದ ಅವಸ್ಥೆಯಲ್ಲಿ ಕೆಲವು ಸಂಗತಿಗಳು ನಮ್ಮ ಅನುಭವಕ್ಕೆ ಬರುತ್ತವೆ. ಸ್ವಪ್ನದಲ್ಲಿ ಬರುವುದೆಲ್ಲ ಸುಳ್ಳು ಎನ್ನುವ ಭಾವನೆ ಸಾಮಾನ್ಯವಾಗಿದೆ. ಆದರೆ ಕೆಲವು ವಿಷಯಗಳನ್ನು ದೇವರು ಸ್ವಪ್ನದಲ್ಲಿ ಅನುಭವಕ್ಕೆ ನಿಲುಕುವಂತೆ ಮಾಡುತ್ತಾನೆ ಎಂದು ತಿಳಿಸಿದರು.

ಜೀವನದ ಮೂಲ ಗುರಿ ಆನಂದ. ಭಗವಂತನು ಆನಂದಮಯನಾಗಿದ್ದಾನೆ. ಪ್ರಾಜ್ಞ ರೂಪಿಯಾದ ಆತನನ್ನು ಉಪಾಸನೆ ಮಾಡುವುದರಿಂದ ನಮಗೆ ಆನಂದದ ಅನುಭವವನ್ನು ಕೊಡುತ್ತಾನೆ ಎಂದರು.

**ರಸಪ್ರಶ್ನೆ ಕಾರ್ಯಕ್ರಮ :** ಶ್ರೀ ಗುರು ರಾಘವೇಂದ್ರ ಸ್ವಾಮಿಗಳು ರಚಿಸಿದ 'ಶ್ರೀರಾಮ ಚಾರಿತ್ರ್ಯ ಮಂಜರಿ' ಕೃತಿ ಯನ್ನು ಆಧರಿಸಿ, ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರಾಮಾಯಣದ ಸಾರ ಸಂಗ್ರಹವನ್ನು 11 ಶ್ಲೋಕಗಳಲ್ಲಿ ಹಿಡಿದಿಟ್ಟಿರುವುದು ಈ ಗ್ರಂಥದ ವಿಶೇಷತೆಯಾಗಿದೆ.

ವಿವಿಧ ಭಜನಾ ಮಂಡಳಿಗಳ 24 ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಒಂದೊಂದು ತಂಡದಲ್ಲಿ ಇಬ್ಬರು ಸ್ಪರ್ಧಿಗಳಿದ್ದರು. 75 ಅಂಕಗಳ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಲಾಗಿತ್ತು. ಡಾ. ರೂಪಶ್ರೀ ಶಶಿಕಾಂತ್ (ಪ್ರಥಮ), ಸಮೀರ್ ಯಜುರ್ವೇದಿ, ಶ್ರೀನಿಧಿ ಯಜುರ್ವೇದಿ (ದ್ವಿತೀಯ), ಸಂಧ್ಯಾ ಪ್ರಕಾಶ್, ಕೆ.ಎಸ್. ಯಮುನಾ (ತೃತೀಯ) ಬಹುಮಾನ ಪಡೆದರು.

ರಸಪ್ರಶ್ನೆಯ ಪರಿಕಲ್ಪನೆ ಹಾಗೂ ನಿರ್ವಹಣೆಯನ್ನು ಅನಿಲ್ ರಾಮಧ್ಯಾನಿ ಮಾಡಿದರು. ಪ್ರಶ್ನೆಪತ್ರಿಕೆಯನ್ನು ಗೋಪಾಲಾಚಾರ್ ಮಣ್ಣೂರ್ ಬಿಡುಗಡೆ ಮಾಡಿದರು.

**ಮೋಡಿ ಮಾಡಿದ ಬಾಲಕ :** ಆತ ಕೇವಲ 7 ವರ್ಷದ ಪುಟ್ಟ ಬಾಲಕ. ಅದ್ಭುತ ಕೊಳಲು ವಾದನದ ಮೂಲಕ ರಾಯರ ಭಕ್ತರಿಗೆ ಮೋಡಿ ಮಾಡಿದ. 3ನೇ ತರಗತಿಯಲ್ಲಿ ಓದುತ್ತಿರುವ ಆ ಬಾಲ ಕಲಾವಿದನ ಹೆಸರು ಸುಧಾಂಶು ಕಟ್ಟಿ. ಹರಪನಹಳ್ಳಿ ಮೂಲದ ಅವರ ಪಾಲಕರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಶಾಸ್ತ್ರೀಯ ಆಲಾಪ್ ಮೂಲಕ ಕಛೇರಿ ಆರಂಭಿಸಿದ ಸುಧಾಂಶು, ಭಾಗ್ಯದ ಲಕ್ಷ್ಮಿ ಬಾರಮ್ಮ, ತೋಳು ತೋಳು ತೋಳು ರಂಗ ತೋಳನ್ನಾಡೈ, ಆವ ಕುಲವೋ ರಂಗ, ರತ್ನ ದೊರಕಿತಲ್ಲ ಎನಗೊಂದು, ಏನ್ ಸವಿ ಏನ್ ಸವಿ ಮುಂತಾದ ಹಾಡುಗಳ ಸವಿಯನ್ನು ಉಣಬಡಿಸಿದರು.

## ಕಡ್ಲೇಬಾಳ್‌ನಲ್ಲಿ ಇಂದು



ದಾವಣಗೆರೆ ಸಮೀಪದ ಶ್ರೀ ಕ್ಷೇತ್ರ ಕಡ್ಲೇಬಾಳು ಗ್ರಾಮದ ಶ್ರೀ ನಾಗಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದಲ್ಲಿ ದೇವಸ್ಥಾನದ 6ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವು ಇಂದು ಮತ್ತು ನಾಳೆ ನಡೆಯಲಿದೆ. ಇಂದು ಪ್ರಾತಃಕಾಲ ಗಣಪತಿ ಪ್ರಾರ್ಥನೆ, ಗಣಪತಿ ಹೋಮ, ನಾಗರಾಜ ಮೂಲಮಂತ್ರ ಹೋಮ, ಪೂರ್ಣಾಹುತಿ, ತೀರ್ಥಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ, ಸಂಜೆ ಮಂಗಳಾರತಿ ಜರುಗಲಿದೆ.

ನಾಳೆ ಶುಕ್ರವಾರ ಪ್ರಾತಃಕಾಲ ಶ್ರೀ ನಾಗಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ವಿಶೇಷ ಪಂಚಾಮೃತಾಭಿಷೇಕ, ಪವಮಾನ ಅಭಿಷೇಕ, ರುದ್ರಾಭಿಷೇಕ, ವಿಶೇಷ ಅಲಂಕಾರ, ಸಾಮೂಹಿಕ ಆಶ್ಲೇಷ ಬಲಿ ಪೂಜೆ, ಮಹಾ ಪೂರ್ಣಾಹುತಿ, ರಥೋತ್ಸವ, ಅನ್ನ ಸಂತರ್ಪಣೆ ಆಯೋಜನೆಗೊಂಡಿದೆ.

ಈ ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಬೆಂಗಳೂರು ಚಾಮರಾಜಪೇಟೆಯ ಅವಿಚ್ಛಿನ್ನ ಪರಂಪರಾ ಕೂಡ್ಲಿ ಶೃಂಗೇರಿ ಮಹಾಸಂಸ್ಥಾನದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ವಿದ್ಯಾವಿಶ್ವೇಶ್ವರ ಭಾರತಿ ಮಹಾಸ್ವಾಮೀಜಿ ವಹಿಸುವರು.

## ಇಫ್ಕೋ ಸಂಸ್ಥೆ ಪ್ರತಿನಿಧಿಯಾಗಿ ಭೂಮೇಶ್ವರಪ್ಪ



ದಾವಣಗೆರೆ, ಮಾ.13- ತಾಲ್ಲೂಕಿನ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಹೆಚ್.ಬಿ.ಭೂಮೇಶ್ವರಪ್ಪ ಅವರು ಕಳೆದ 12ರಂದು ಹುಬ್ಬಳ್ಳಿಯಲ್ಲಿ ಜರುಗಿದ ಚುನಾವಣೆಯಲ್ಲಿ ಇಫ್ಕೋ ಸಂಸ್ಥೆ ಆರ್‌ಜಿಬಿ ಪ್ರತಿನಿಧಿಯಾಗಿ ಚುನಾಯಿತರಾಗಿದ್ದಾರೆ.

## ನಗರದ ಶ್ರೀ ರಾಘವೇಂದ್ರ ಸಪ್ತಾಹ ಸಮಾರಂಭದಲ್ಲಿ ಇಂದು



ಬಾಪೂಜಿ ಸಮುದಾಯ ಭವನದಲ್ಲಿ ನಡೆಯುತ್ತಿರುವ ಶ್ರೀ ರಾಘವೇಂದ್ರ ಸಪ್ತಾಹ ಸಮಾರಂಭದಲ್ಲಿ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಪೇಜಾವರ ಅಧೋಕ್ಷಜ ಮಠ, ಉಡುಪಿ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು, ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದಂಗಳವರ ದಿವ್ಯ ಸಾನಿಧ್ಯದಲ್ಲಿ ಇಂದು ಬೆಳಿಗ್ಗೆ 6ರಿಂದ 7.30ರವರೆಗೆ ಸುಪ್ರಭಾತ ಪ್ರಾತಃಸ್ಮರಣೆಯನ್ನು ವಿದ್ವಾನ್ ಕೆ. ಅಪ್ಪಣ್ಣ ಆಚಾರ್ಯ, ಡಾ. ಜೆ. ಸದಾನಂದ ಶಾಸ್ತ್ರಿ ನಡೆಸಿಕೊಡಲಿದ್ದಾರೆ.

ನಂತರ ಬೆಳಿಗ್ಗೆ 7.30ಕ್ಕೆ ಭಜನೆ, 8.30 ಕ್ಕೆ ಶ್ರೀ ಪಲಿಮಾರು ಮಠದ ಸುಧಾ ವಿದ್ಯಾರ್ಥಿಗಳಿಂದ ಪ್ರವಚನ ನಡೆಯಲಿದೆ. ಬೆಳಗ್ಗೆ 9 ರಿಂದ ವಿದ್ವಾನ್ ಭೀಮಸೇನಾಚಾರ್ ಪುರೋಹಿತ್ ಅವರು ತತ್ವವಾದಕ್ಕೆ ಗುರುರಾಯರ ಕೊಡುಗೆ ಕುರಿತು ಪ್ರವಚನ ನೀಡಲಿದ್ದಾರೆ.

ಮಧ್ಯಾಹ್ನ 2.30 ರಿಂದ ಶ್ರೀ ಗುರು ಜಗನ್ನಾಥ ದಾಸರು ವಿರಚಿತ 'ಕನ್ನಡ ರಾಘವೇಂದ್ರ ವಿಜಯ' ಸಾಮೂಹಿಕ ಪಾರಾಯಣ ನಿರ್ವಹಣೆ ಇದ್ದು. ಸಂಜೆ 5 ರಿಂದ ವಿದ್ವಾನ್ ಪ್ರಾಣೇಶಾಚಾರ್ ಕಡೂರ್ ಅವರಿಂದ ದಾಸ ಸಾಹಿತ್ಯದಿಂದಾದ ಉಪಕಾರ ಕುರಿತು ಹಾಗೂ ಉಡುಪಿಯ ವಿದ್ವಾನ್ ಕುತ್ಪಾಡಿ ಕೃಷ್ಣರಾಜ ಭಟ್ಟ ಅವರಿಂದ ಕರ್ಮಣೇವಾಧಿಕಾರಸ್ತೇ ಕುರಿತು ಪ್ರವಚನ ಜರುಗಲಿದೆ.

ನಂತರ 7.15 ಕ್ಕೆ ಶ್ರೀ ರಾಘವೇಂದ್ರ ಸರ್ವಾಭಯ ಪ್ರಾರ್ಥನೆ ಬಳಿಕ ಅನುಗ್ರಹ ಸಂದೇಶವಿದೆ. ರಾತ್ರಿ 9ಕ್ಕೆ ವಿದ್ವಾನ್ ಮೈಸೂರು ರಾಮಚಂದ್ರಾಚಾರ್ಯ ಅವರಿಂದ ದಾಸವಾಣಿ ನಡೆಯಲಿದೆ.

# ಸರ್ಕಾರಿ ತಾಣಗಳಿಗೆ ಎಸ್ಸೆಸ್, ಎಸ್ಸೆಸ್ಸೆಂ ಹೆಸರು

**ಹೈಕೋರ್ಟ್ ನೋಟಿಸ್**

ಬೆಂಗಳೂರು, ಮಾ. 13 - ಸರ್ಕಾರದ ಅನುದಾನದಲ್ಲಿ ನಿರ್ಮಿಸಲಾದ ಸರ್ಕಾರಿ ಕಟ್ಟಡ ಹಾಗೂ ಇನ್ನಿತರ ಸ್ಥಳಗಳಿಗೆ ಜೀವಂತ ರಾಜಕಾರಣಿಗಳ ನಾಮಕರಣ ಮಾಡಬಾರದು ಎಂಬ ಹೈಕೋರ್ಟ್ ಆದೇಶವನ್ನು ದಾವಣಗೆರೆ ಜಿಲ್ಲೆಯಲ್ಲಿ ಉಲ್ಲಂಘಿಸಲಾಗಿದೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಕಳಿಸಿದೆ.

ದಾವಣಗೆರೆ ವಕೀಲ ಎ.ಸಿ. ರಾಘವೇಂದ್ರ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ತೋಟಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೆಸರುಗಳನ್ನು ಸರ್ಕಾರಿ ಜಾಗಗಳಿಗೆ ಇರಿಸಿರುವ ಬಗ್ಗೆ ಆಕ್ಷೇಪಿಸಿದ್ದಾರೆ.

ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತ್ತು. ಈ ಬಗ್ಗೆ ಮಲ್ಲಿಕಾರ್ಜುನ್ ಹಾಗೂ ಶಿವಶಂಕರಪ್ಪ ಅವರಿಗೂ ನೋಟಿಸ್ ಕಳಿಸಲಾಗಿದೆ.

ಚನ್ನಗಿರಿ ಕ್ಷೇತ್ರದ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಹೆಸರನ್ನು ತಾಲ್ಲೂಕು ಕ್ರೀಡಾಂಗಣಕ್ಕೆ ಇರಿಸಿದ್ದನ್ನು ತೆಗೆದು ಹಾಕಲು ಹೈಕೋರ್ಟ್ 2012ರಲ್ಲಿ ಆದೇಶ ಹೊರಡಿಸಿದ್ದನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

ದಾವಣಗೆರೆಯ ಖಾಸಗಿ ಬಸ್ ನಿಲ್ದಾಣ, ಆಶ್ರಯ ಬಡಾವಣೆ, ಉದ್ಯಾನವನ, ನಗರ ಪಾಲಿಕೆಯ ಸಭಾಂಗಣಕ್ಕೆ ಶಿವಶಂಕರಪ್ಪ ಅವರ ಹೆಸರಿಡಲಾಗಿದೆ. ಕೆರೆ, ಜಿಲ್ಲಾ ಪಂಚಾಯ್ತಿ ಸಭಾಂಗಣ ಹಾಗೂ ಆಶ್ರಯ ಕಾಲೊನಿಗೆ ಮಲ್ಲಿಕಾರ್ಜುನ್ ಹೆಸರಿಡಲಾಗಿದೆ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

## ಬಿಜೆಪಿ ಎರಡನೇ ಪಟ್ಟಿಯಲ್ಲಿ ಗಡ್ಕರಿ, ಗೋಯಲ್

ನವದೆಹಲಿ, ಮಾ. 23 – ಕೇಂದ್ರ ಬಿಜೆಪಿಯು ಮುಂದಿನ ಲೋಕಸಭಾ ಚುನಾವಣೆಗಾಗಿ 72 ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಮಾಡಿದೆ. ಇದ ರಲ್ಲಿ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಪಿಯೂಶ್ ಗೋಯಲ್ ಹಾಗೂ ಅನು ರಾಗ್ ಸಿಂಗ್ ಠಾಕೂರ್ ಅವರಿದ್ದಾರೆ.

ಹರಿಯಾಣದ ಮಾಜಿ ಮುಖ್ಯಮಂತ್ರಿ ಮನೋಹರಲಾಲ್ ಕಟ್ಟರ್ ಸೇರಿದಂತೆ ಮೂವರು ಮಾಜಿ ಮುಖ್ಯಮಂತ್ರಿಗಳು ಲೋಕಸಭೆಗೆ ಸ್ಪರ್ಧಿಸಲಿದ್ದಾರೆ.

ಮಾಜಿ ಕೇಂದ್ರ ಸಚಿವರಾದ ಸದಾನಂದ ಗೌಡ ಹಾಗೂ ರಮೇಶ್ ಪೊಖ್ರಿಯಾಲ್ ನಿಶಾಂಕ್ ಅವರನ್ನು ಕೈಬಿಡಲಾಗಿದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಸಹ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

## ಕೇರಳಕ್ಕೆ 5 ಸಾವಿರ ಕೋಟಿ ರೂ. ಸಾಲ : ಕೇಂದ್ರ

ನವದೆಹಲಿ, ಮಾ. 13 -ಕೆಲ ಷರತ್ತುಗಳ ಆಧಾರದ ಮೇಲೆ ಕೇರಳ ಸರ್ಕಾರ 5 ಸಾವಿರ ಕೋಟಿ ರೂ.ಗಳ ಸಾಲ ಪಡೆಯಲು ಅವಕಾಶ ನೀಡಲು ಸಿದ್ಧವಿರುವುದಾಗಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೇರಳದ ಹಣಕಾಸು ಪರಿಸ್ಥಿತಿಯನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಈ ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

ಆದರೆ, 5 ಸಾವಿರ ಕೋಟಿ ರೂ.ಗಳಿಂದ ಏನೂ ಆಗುವುದಿಲ್ಲ. ಕನಿಷ್ಠ 10 ಸಾವಿರ ಕೋಟಿ ರೂ.ಗಳಾದರೂ ಅಗತ್ಯವಿದೆ ಎಂದು ಕೇರಳ ಸರ್ಕಾರ ಹೇಳಿದೆ.

ಹಣಕಾಸು ಬಿಕ್ಕಟ್ಟಿನಲ್ಲಿರುವ ಕೇರಳಕ್ಕೆ ಒಂದು ಸಮಯದ ನೆರವಿನ ಬ್ಯಾಕೇಜ್ ಪ್ರಕಟಿಸುವಂತೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ 5 ಸಾವಿರ ಕೋಟಿ ರೂ.ಗಳ ಪ್ಯಾಕೇಜ್‌ಗೆ ಕೇಂದ್ರ ಸರ್ಕಾರ ಮುಂದಾಗಿದೆ.

ಪಿಂಚಣಿ, ವೇತನ ಹಾಗೂ ಇತರೆ ಉದ್ದೇಶಗಳಿಗೆ ನೆರವಾಗುವ ಸಲುವಾಗಿ 5 ಸಾವಿರ ಕೋಟಿ ರೂ.ಗಳ ಸಾಲ ಪಡೆಯಲು ಅನುಮತಿ ನೀಡುವುದಾಗಿ ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಮಣ್ ತಿಳಿಸಿದ್ದಾರೆ.

## ಲೋಕಸಭಾ ಚುನಾವಣೆ : ಪ್ರಚಾರಕ್ಕಾಗಿ ಗುಂಡೂರಾವ್ ನೇತೃತ್ವದ ಸಮಿತಿ ರಚನೆ

ಬೆಂಗಳೂರು, ಮಾ. 13 - ಲೋಕಸಭಾ ಚುನಾವಣಾ ಉದ್ದೇಶದಿಂದ ಮಾಧ್ಯಮಗಳಲ್ಲಿ ಬಿಂಬಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ಪಂಚ ಮಂತ್ರಿಗಳ ವಕ್ತಾರರ ತಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರಚಿಸಿದ್ದಾರೆ.

ತಂಡದಲ್ಲಿ ಗುಂಡೂರಾವ್ ಅಲ್ಲದೆ, ಸಚಿವರಾದ ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ, ಸಂತೋಷ ಲಾಡ್ ಹಾಗೂ ಈಶ್ವರ ಖಂಡ್ರೆ ಇದ್ದಾರೆ. ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿನಿತ್ಯ ಜಾಹೀರಾತು ನೀಡುತ್ತಿರುವುದಲ್ಲದೆ, ಸರ್ಕಾರದ ವೆಚ್ಚದಲ್ಲೇ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಮಾಡುತ್ತಿದೆ.

ಇದರ ನಡುವೆ ಪ್ರಚಾರಕ್ಕಾಗಿ ಸಚಿವರ ತಂಡ ರಚಿಸಿರುವ ಮುಖ್ಯಮಂತ್ರಿಗಳು, ಈ ಸಚಿವರಿಗೆ ಬೇಕಾಗುವ ಪೂರಕ ದಾಖಲೆಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

## ಕೈದಾಳೆ ಗ್ರಾಮದಲ್ಲಿ ಇಂದು ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 7.45ರಿಂದ 8.15ರವರೆಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವ ಜರುಗಲಿದೆ.

ಮಧ್ಯಾಹ್ನ 1 ರಿಂದ ಸಂಜೆ 5 ರವರೆಗೆ ಜವಳ ಕಾರ್ಯಕ್ರಮ, 3 ರಿಂದ ಸಂಜೆ 6-30 ರವರೆಗೆ ಜೋಡಿ ಬಸವಗಳ ಹಾಗೂ ಗ್ರಾಮದ ಟ್ರ್ಯಾಕ್ಟರ್‌ಗಳ ಮೂಲಕ ಮೆರವಣಿಗೆಯೊಂದಿಗೆ ಪಾನಕ ವಿತರಣೆ. ಸಂಜೆ 5 ರಿಂದ ಸಂಜೆ 6-30 ರವರೆಗೆ ಅಗ್ನಿಕುಂಡ ಪೂಜೆ ಮತ್ತು ಓಕಳಿ ಹಾಗೂ ರಾತ್ರಿ 9-30 ರಿಂದ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ, ಪುರವಂತರ ಒಡಪು ಗೀತೆಗಳೊಂದಿಗೆ ಮುಂಜಾನೆ 2-30 ಗಂಟೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಸ್ವಾಮಿಯು ನಡೆಮಡಿಯೊಂದಿಗೆ ಅಗ್ನಿಕುಂಡ ಪ್ರವೇಶ ಇರುತ್ತದೆ.

ನಾಳೆ ಶುಕ್ರವಾರ ಸಂಜೆ 5 ಗಂಟೆಗೆ ದಿಬ್ಬಣ ಕಾರ್ಯಕ್ರಮವಿರುತ್ತದೆ.

## ಬ್ಯಾಂಕ್ ಖಾತೆಗಳ ಮೇಲೆ ಐಟಿ ಕ್ರಮ

**ಖರ್ಚಿಗೆ ಹಣ ಇಲ್ಲ ಎಂದ ಖರ್ಗೆ**

ಕಲಬುರಗಿ, ಮಾ. 13 – ಕೇಂದ್ರದ ಬಿಜೆಪಿ ಸರ್ಕಾರ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಗಳನ್ನು ತಡೆದಿದೆ. ಆದಾಯ ತೆರಿಗೆ ಇಲಾಖೆ ಭಾರೀ ದಂಡ ವಿಧಿಸಿದೆ. ನಮ್ಮ ಬಳಿ ಖರ್ಚಿಗೆ ಹಣ ಇಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.ಕಾಂಗ್ರೆಸ್ ಪಕ್ಷದ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೆ, ಸುಪ್ರೀಂ ಕೋರ್ಟ್ ನಿರ್ದೇಶನದ ಹೊರತಾಗಿಯೂ ಅವರು ತಮಗೆ ದೊರೆತ ಸಾವಿರಾರು ಕೋಟಿ ರೂ.ಗಳ ಮಾಹಿತಿ ಬಹಿರಂಗ ಪಡಿಸುತ್ತಿಲ್ಲ ಎಂದು ಖರ್ಗೆ ಆಕ್ಷೇಪಿಸಿದ್ದಾರೆ.

ಜನರಿಂದ ದೇಣಿಗೆ ಪಡೆದ ಹಣವಿದ್ದ ಖಾತೆಗಳನ್ನು ಅವರು ತಡೆದಿದ್ದಾರೆ. ನಮ್ಮ ಬಳಿ ಖರ್ಚು ಮಾಡಲು ಹಣವಿಲ್ಲ ಎಂದು ಖರ್ಗೆ ಹೇಳಿದರು.

SS IMS SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist
ಇದಕ್ಕಾಗಿ ಸಮಾಲೋಚಿಸಿ:
• ಗರ್ಭಾವಸ್ಥೆಯ ಮಧುಮೇಹ
• ಥೈರೊಯ್ಡ್ ಸಮಸ್ಯೆಗಳು
• ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
• ಹೃದ್ರೋಗಿಗಳಲ್ಲಿ ಮಧುಮೇಹ
• ನರಮಂಡದ ತೊಂದರೆಗಳು
• ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
• ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು
ದಿನಾಂಕ: ಶನಿವಾರ, 16ನೇ ಮಾರ್ಚ್ 2024 । ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಕರ್ನಾಟಕ ಸರ್ಕಾರ
ಮಹಾನಗರ ಪಾಲಿಕೆ, ದಾವಣಗೆರೆ
ಸನ್ಮಾನ್ಯ
ಡಾ।। ಶಾಮನೂರು ಶಿವಶಂಕರಪ್ಪನವರು
ಶಾಸಕರು, ದಾವಣಗೆರೆ
ದಕ್ಷಿಣ ವಿಧಾನಸಭಾ ಕ್ಷೇತ್ರ
ಇವರಿಂದ
ದಾವಣಗೆರೆ ಕೆ.ಆರ್. ಮಾರುಕಟ್ಟೆ ಉದ್ಘಾಟನೆ ಹಾಗೂ ಅರ್ಹ ಫಲಾನುಭವಿಗಳಿಗೆ, ವ್ಯಾಪಾರಸ್ಥರಿಗೆ ಮಳಿಗೆಗಳ ಮಂಜೂರಾತಿ ಪತ್ರ ವಿತರಣೆ
ದಿನಾಂಕ : 14.03.2024 ಗುರುವಾರ
ಸಮಯ : ಮಧ್ಯಾಹ್ನ 12:30ಕ್ಕೆ
ಸ್ಥಳ : ಕೆ.ಆರ್ .ಮಾರುಕಟ್ಟೆ
ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಮಹಾನಗರ ಪಾಲಿಕೆಯ ಮಹಾಪೌರರು, ಆಯುಕ್ತರು, ಸದಸ್ಯರುಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ
ಅಧ್ಯಕ್ಷರು ಮತ್ತು ಪದಾಧಿಕಾರಿಗಳು,
ಕೆ.ಆರ್.ಮಾರುಕಟ್ಟೆ ವರ್ತಕರ ಸಂಘ, ದಾವಣಗೆರೆ.

## ಕೈಗಾರಿಕಾ ಬೆಳವಣಿಗೆ ದರ ಶೇ.3.8ಕ್ಕೆ ಇಳಿಕೆ

ನವದೆಹಲಿ, ಮಾ. 13 – ಭಾರತದ ಕೈಗಾರಿಕಾ ಬೆಳವಣಿಗೆ ದರ ಜನವರಿಯಲ್ಲಿ ಶೇ.3.8ಕ್ಕೆ ಇಳಿಕೆಯಾ ಗಿದೆ. ಫೆಬ್ರವರಿಯಲ್ಲಿ ಹಣದು ಬ್ಬರ ಶೇ.5.09ಕ್ಕೆ ಏರಿಕೆಯಾಗಿದೆ. ಆದರೂ, ಸತತ 6 ತಿಂಗಳಿನಿಂದ ಹಣದುಬ್ಬರ ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಹಂತದಲ್ಲೇ ಇದೆ. ಐ.ಐ.ಪಿ. ಆಧರಿತ ಕೈಗಾರಿಕಾ ಉತ್ಪನ್ನ ಬೆಳವಣಿಗೆ ಜನವರಿಯಲ್ಲಿ ಶೇ.3.8ಕ್ಕೆ ಇಳಿಕೆಯಾಗಿದೆ. 2023ರ ಡಿಸೆಂಬರ್ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ದರ ಶೇ.4.2ರಷ್ಟಿತ್ತು.

## ನಾಳೆ ಬ್ರೆಸ್ಟ್ ಕ್ಯಾನ್ಸರ್ ಜಾಗೃತಿ

ದಾವಣಗೆರೆ, ಮಾ. 14 - ದಾವಣಗೆರೆ ಲೇಡೀಸ್ ಸರ್ಕಲ್ -168 ವತಿಯಿಂದ ಬ್ರೆಸ್ಟ್ ಕ್ಯಾನ್ಸರ್ ಬಗ್ಗೆ ಜಾಗೃತಿ ಅಭಿಯಾನವನ್ನು ನಾಡಿದ್ದು ದಿನಾಂಕ 15ರ ಶುಕ್ರವಾರ ಸಂಜೆ 5 ರಿಂದ 6ರವರೆಗೆ ಸ್ಥಳೀಯ ವಿದ್ಯಾನಗರ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಮೊಬೈಲ್ : 97409 84864, 81056 96419 ರಲ್ಲಿ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಸೈಕಲ್ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟಿನ ವತಿಯಿಂದ ಇಂದು ಸಂಜೆ 5 ಕ್ಕೆ ಶ್ರೀ ಡಾ. ಸದ್ಯೋಜ್ಯಾತ ಶಿವಾಚಾರ್ಯ ಹಿರೇಮಠದ ಆವ ರಣದಲ್ಲಿ 150ನೇ ಸೈಕಲ್ ವಿತರಣೆ ಅಂಗವಾಗಿ ಇಂದು 50 ಸೈಕ ಲ್‌ಗಳ ವಿತರಣಾ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ. ಅತಿಥಿಗಳಾಗಿ ಡಾ. ಮಧು ಕೆ.ಎನ್., ಡಾ. ಪ್ರಭುದೇವ್ ಕೆ.ಎಂ., ಡಾ.ವಿ.ಎಸ್. ರಾಜು, ಉದಯ್ ಕುಮಾರ್, ಡಾ. ಮಾಳವಿಕ ಮತ್ತಿತರರು ಉಪಸ್ಥಿತರಿರುವರು.

**ರಂಜಾನ್ ರೋಜಾ ಸಮಯ**

ದಿನಾಂಕ : 14.03.2024
ಇಫ್ತಾರ್ ಸಮಯ : 6.42
ದಿನಾಂಕ : 15.03.2024
ಸಹೇರಿ ಸಮಯ : 5.16


# ಪುಣ್ಯಸ್ಮರಣೆ



ಜನನ : 1942 ಮರಣ : 2023

ನಿವೃತ್ತ ಶಿರಸ್ತೇದಾರ್


**ಕೆ.ಹೆಚ್. ರೇವಣಸಿದ್ದಯ್ಯ**

ನೀವು ನಮ್ಮನ್ನಗಲಿ
ಇಂದಿಗೆ ಒಂದು ವರ್ಷ ಕಳೆಯಿತು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಉಮಾದೇವಿ ಕೆ.ಎಂ.
ತಂಗಿ : ಶ್ರೀಮತಿ ಶಿವಕುಮಾರಿ ಕೆ.ಹೆಚ್. ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಕರ್ಕಿಕೆರೆ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.
ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.



# ಜನ್ಮದಿನದ ಶುಭಾಶಯಗಳು







ನಾಳೆ ದಿ : 15-3-2024 ರಂದು
ತಮ್ಮ ಜನ್ಮದಿನವನ್ನು
ಆಚರಿಸಿಕೊಳ್ಳುತ್ತಿರುವ
ಎಸ್.ಎಸ್. ಕೇರ್ ಟ್ರಸ್ಟ್‌ನ
ಲೈಫ್ ಟ್ರಸ್ಟಿಗಳು,
ದಾವಣಗೆರೆ ಜಿಲ್ಲೆಯ ಸರ್ವ
ಜನಾಂಗವನ್ನು ಶೈಕ್ಷಣಿಕವಾಗಿ
ಹಾಗೂ ಆರೋಗ್ಯವಂತರನ್ನಾಗಿ
ಮಾಡಲು ನಿರಂತರ ಶ್ರಮಿಸುತ್ತಿರುವ

**ಡಾ|| ಪ್ರಭಾ ಮಲ್ಲಿಕಾರ್ಜುನ್ ಶಾಮನೂರು**

ಇವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಡಾ|| ಪ್ರಭಾ ಅವರು
ಅಪ್ರತಿಮ ಜನನಾಯಕಿಯಾಗಿ
ಬೆಳೆಯಲಿ,
ನೂರ್ಕಾಲ
ಆರೋಗ್ಯವಂತರಾಗಿ
ಬಾಳಲಿ ಎಂದು ಹಾರೈಸುತ್ತೇವೆ.



ಕೆ. ಬಸವರಾಜ್ ಎಸ್.ಜಿ. ಪುಷ್ಪರಾಜ್ ಶಾಮನೂರು





# ಹೃದಯಪೂರ್ವಕ ಕೃತಜ್ಞತೆಗಳು

ದಿನಾಂಕ : 12.03.2024 ಮಂಗಳವಾರದಂದು ಹುಬ್ಬಳ್ಳಿ ಮಹಾನಗರ ಪಾಲಿಕೆಯ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ಹುಬ್ಬಳ್ಳಿಯಲ್ಲಿ ನಡೆದ ಪ್ರಪಂಚದಲ್ಲೇ ಅತ್ಯಂತ ದೊಡ್ಡ ರಸಗೊಬ್ಬರ ತಯಾರಿಕಾ ಸಹಕಾರ ಸಂಸ್ಥೆಯಾದ ಇಫ್ಕೋ ಸಂಸ್ಥೆ ದಾವಣಗೆರೆ/ಧಾರವಾಡ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಆರ್‌ಜಿಬಿ ಸದಸ್ಯರಾಗಿ ಭಾರೀ ಬಹುಮತದಿಂದ ಆಯ್ಕೆಯಾಗಿದ್ದು, ನನಗೆ ಸಹಕಾರ ನೀಡಿದ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ **ಸನ್ಮಾನ್ಯ ಎಸ್.ಎಸ್. ಮಲ್ಲಿಕಾರ್ಜುನ್** ಶಾಸಕರಾದ **ಸನ್ಮಾನ್ಯ ಶಾಮನೂರು ಶಿವಶಂಕರಪ್ಪ**, ಚನ್ನಗಿರಿ ಶಾಸಕರಾದ **ಸನ್ಮಾನ್ಯ ಶಿವಗಂಗಾ ಬಸವರಾಜ್**, ಮಾಯಕೊಂಡ ಶಾಸಕರಾದ **ಸನ್ಮಾನ್ಯ ಕೆ.ಎಸ್. ಬಸವಂತಪ್ಪ**, ಹೊನ್ನಾಳಿ ಶಾಸಕರಾದ **ಸನ್ಮಾನ್ಯ ಡಿ.ಜಿ. ಶಾಂತನಗೌಡ**, ಜಗಳೂರು ಶಾಸಕರಾದ **ಸನ್ಮಾನ್ಯ ಬಿ. ದೇವೇಂದ್ರಪ್ಪ**, ಹರಪನಹಳ್ಳಿ. ಶಾಸಕರಾದ **ಶ್ರೀಮತಿ ಲತಾ ಮಲ್ಲಿಕಾರ್ಜುನ್**, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ **ಮುದೇಗೌಡ್ರು ಗಿರೀಶ್, ಬಿ. ಕರಿಬಸಪ್ಪ, ಬಿ. ಶೇಖರಪ್ಪ**, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷರಾದ **ಬಿ.ಕೆ. ಪ್ರಕಾಶ್, ಬಿ.ಕೆ. ಪರಶುರಾಮ್**, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಅಧ್ಯಕ್ಷರು ಕಾಂಗ್ರೆಸ್ ಪಕ್ಷ **ಜಿ.ಡಿ. ಗುರುಸ್ವಾಮಿ**, ಜನತಾ ಬಜಾರ್ ಅಧ್ಯಕ್ಷರು **ಹೊನ್ನೂರು ಪ್ರಕಾಶ್**, ಕಾಂಗ್ರೆಸ್ ಮುಖಂಡರು, ದಾವಣಗೆರೆ., ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟದ ಅಧ್ಯಕ್ಷರಾದ **ಡಿ.ಎನ್. ಮಹೇಶ್ವರಪ್ಪ**, ನಿರ್ದೇಶಕರುಗಳಾದ **ಬಿ.ಎಸ್. ಶಿವಕುಮಾರ್, ಗಣೇಶ್, ಎನ್. ತಿಪ್ಪೇಶ್, ಎಚ್.ಕೆ. ದೇವರಾಜ್. ಎಂ. ಶೇಖರಪ್ಪ, ಎ. ಶಿವಕುಮಾರ್, ರಾಮು**, ದಾವಣಗೆರೆ ತಾಲ್ಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟದ ಅಧ್ಯಕ್ಷರಾದ **ಕೆ.ಎಚ್. ರುದ್ರಪ್ಪ, ಹಾಗೂ ಕೆ.ಎಸ್. ಬಸವರಾಜ್**, ಉಪಾಧ್ಯಕ್ಷರು, ದಾವಣಗೆರೆ - ಧಾರವಾಡ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಮಸ್ತ ಸಿಇಒಗಳಿಗೆ ಹಾಗೂ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಆಡಳಿತ ಮಂಡಳಿಯ ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ ಹಾಗೂ ಅಭಿಮಾನಿಗಳಿಗೆ

**ಹೃದಯ ಪೂರ್ವಕ ಕೃತಜ್ಞತೆಗಳು.**






IFFCO


**ಹೆಚ್.ಬಿ. ಭೂಮೇಶ್ವರಪ್ಪ**

ಇಫ್ಕೋ ಸಂಸ್ಥೆಯ ಆರ್.ಜಿ.ಬಿ. ಸದಸ್ಯರು,
ದಾವಣಗೆರೆ/ಧಾರವಾಡ


# ನಮ್ಮ ಕಿಡ್ನಿಗಳ ಬಗ್ಗೆ ಜಾಗೃತಿ ಇರಲಿ...

## ‘ದುರ್ಬಲರನ್ನು ಬೆಂಬಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿರಲಿ’





**ಇಂದು ವಿಶ್ವ ಕಿಡ್ನಿ ದಿನ**


**ಡಾ|| ಪ್ರಮೋದ್ ಜಿ.ಆರ್.**
ತಜ್ಞ ವೈದ್ಯರು, ಮೂತ್ರಪಿಂಡ & ಕಿಡ್ನಿ ಕಸಿ ವಿಭಾಗ,
ಎಸ್. ಎಸ್. ನಾರಾಯಣ
ಸೂಪರ್ ಸ್ಪೆಷಲಿಟಿ ಸೆಂಟರ್, ದಾವಣಗೆರೆ.




ಮೂತ್ರಪಿಂಡಗಳು ಶರೀರದ ಪ್ರಮುಖ ಅಂಗಗಳು. ಇವು ಕಂದು ಬಣ್ಣದ ಮುಷ್ಠಿ ಗಾತ್ರವಿರುವ ಹುರುಳಿಯಾಕಾರದ ಜೋಡಿ ಅಂಗಗಳು. ಇವು ಶರೀರದ ಹಿಂಭಾಗದಲ್ಲಿ ಬೆನ್ನು ಹುರಿಯ ಎರಡು ಪಕ್ಕದಲ್ಲಿವೆ. ದೇಹದಲ್ಲಿ ಸುಮಾರು 5 ಲೀಟರ್ ರಕ್ತ ಸಂಚರಿಸುತ್ತಿದ್ದು, ಪ್ರತಿ ದಿನ ಎರಡು ಕಿಡ್ನಿಗಳಲ್ಲಿ 40 ಬಾರಿ ರಕ್ತ ಶುದ್ದೀಕರಣಗೊಳ್ಳುತ್ತದೆ. ದೇಹಕ್ಕೆ ಅಗತ್ಯವಿಲ್ಲದ ಹಾನಿಕಾರಕ ಅಂಶಗಳು ಮೂತ್ರದ ಮೂಲಕ ದೇಹದಿಂದ ವಿಸರ್ಜಿಸಲ್ಪಡುತ್ತವೆ. ರಕ್ತದ ಉತ್ಪಾದನೆ, ರಕ್ತದ ಒತ್ತಡ ಮತ್ತು ರಕ್ತದಲ್ಲಿ ಲವಣಾಂಶಗಳ ಮಟ್ಟಗಳನ್ನು ಸಮತೋಲನದಲ್ಲಿಡುವುದು ಮೂತ್ರಪಿಂಡದ ಮುಖ್ಯ ಕೆಲಸಗಳು. ಆಂಗ್ಲ ಭಾಷೆಯಲ್ಲಿ ಮೂತ್ರಪಿಂಡವನ್ನು ಕಿಡ್ನಿ ಎಂದು ಕರೆಯಲಾಗುತ್ತದೆ. ಮತ್ತು ಜನ-ಸಾಮಾನ್ಯರಲ್ಲಿ ಕಿಡ್ನಿ ಪದ ಹೆಚ್ಚು ಬಳಕೆಯಲ್ಲಿದೆ.

ಈ ಜೀವರಕ್ಷಕ ಅಂಗದ ಕಾಯಿಲೆಗಳ ಕುರಿತು ಸಾಕಷ್ಟು ಜನರಲ್ಲಿ ಅನೇಕ ತಪ್ಪು ಕಲ್ಪನೆಗಳಿವೆ. ಹಲವು ಬಾರಿ ಈ ತಪ್ಪು ಕಲ್ಪನೆಗಳು ಅನಾಹುತಕ್ಕೆ ದಾರಿ ಮಾಡಿಕೊಡುತ್ತವೆ. ಜನಸಾಮಾನ್ಯರ ಆರೋಗ್ಯದಲ್ಲಿ ಮೂತ್ರಪಿಂಡಗಳ ಪ್ರಾಮುಖ್ಯತೆ, ಅದಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ತಡೆಗಟ್ಟುವ ಮಾಹಿತಿ ಬಗ್ಗೆ ಜಾಗೃತಿ ಮೂಡಿಸಲು ವಿಶ್ವದಾದ್ಯಂತ ಪ್ರತಿ ವರ್ಷ ಮಾರ್ಚ್ 2ನೇ ಗುರುವಾರ ‘ವಿಶ್ವ ಮೂತ್ರ ಪಿಂಡ ದಿನ’ವೆಂದು ಆಚರಿಸಲಾಗುತ್ತಿದೆ. ಮೂತ್ರ ಪಿಂಡ ಕಾಯಿಲೆಗಳಿಗೆ ಸಂಬಂಧಿಸಿದ ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

**ಮೂತ್ರಪಿಂಡ ವೈಫಲ್ಯದಲ್ಲಿ 2 ಮೂತ್ರಪಿಂಡಗಳು ವಿಫಲವಾಗುತ್ತ ವೆಯೇ?**

ಹೌದು, ಸಾಮಾನ್ಯವಾಗಿ ಮೂತ್ರಪಿಂಡ ವೈಫಲ್ಯಕ್ಕೆ ಕಾರಣವಾದ ರೋಗಗಳು ಎರಡೂ ಮೂತ್ರಪಿಂಡಗಳ ಮೇಲೆ ಪ್ರಭಾವ ಬೀರುತ್ತವೆ. ಎರಡೂ ಮೂತ್ರ ಪಿಂಡಗಳು ವಿಫಲವಾದಾಗಲೇ ಮೂತ್ರಪಿಂಡ ವೈಫಲ್ಯ ಎಂದು ಕರೆಯಲಾಗುತ್ತದೆ.

**ಮೂತ್ರಪಿಂಡ ವಿಫಲವಾದರೆ ಏನಾಗುತ್ತದೆ ?**

ಶರೀರದಲ್ಲಿ ನೀರು ಮತ್ತು ಲವಣಾಂಶಗಳ ಪ್ರಮಾಣ ಹೆಚ್ಚಾಗುತ್ತದೆ, ದೇಹ ಬಾವು ಬರುತ್ತದೆ, ರಕ್ತದ ಒತ್ತಡ ಏರಿಕೆಯಾಗುತ್ತದೆ.

ರಕ್ತಹೀನತೆ - (ಎಂದರೆ ರಕ್ತದಲ್ಲಿ ಹಿಮೊಗ್ಲೋಬಿನ್ ಪ್ರಮಾಣ ಕಡಿಮೆ ಯಾಗುವುದು), ಮೂಳೆಯ ರೋಗ (ವಿಟಮಿನ್ ‘ಡಿ’ ಕೊರತೆಯಿಂದ) ಕುಂಠಿತವಾಗುವ ಬೆಳವಣಿಗೆ ಸುಸ್ತು, ಆಯಾಸ, ಹಸಿವು ಕಡಿಮೆಯಾಗುವುದು, ಪದೇ ಪದೇ ವಾಂತಿ.

**ಕಿಡ್ನಿ ವೈಫಲ್ಯತೆಗೆ ಕಾರಣವಾಗುವ ಮುಖ್ಯ ಕಾರಣಗಳು ಯಾವುವು ?**

ಮೂತ್ರಪಿಂಡದ ವೈಫಲ್ಯತೆಗೆ ಹಲವಾರು ಕಾರಣಗಳಿದ್ದು, ಬಹುತೇಕ ಸಂದರ್ಭಗಳಲ್ಲಿ ತಡೆಗಟ್ಟಬಹುದು. ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಸಾಧ್ಯವಾಗದೇ ಇರಬಹುದು.

ಮೂತ್ರಪಿಂಡದ ವೈಫಲ್ಯಕ್ಕೆ ನಮ್ಮ ದೇಶದಲ್ಲಿ ಡಯಾಬಿಟೀಸ್ ಮತ್ತು ರಕ್ತದ ಏರೊತ್ತಡ ಅತಿ ಮುಖ್ಯ ಕಾರಣಗಳಾಗಿವೆ. ಈ ಎರಡೂ ಕಾಯಿಲೆಗಳಿಂದ ಕಿಡ್ನಿಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ಸೂಕ್ತ ಚಿಕಿತ್ಸೆಯಿಂದ ತಡೆಗಟ್ಟಬಹುದು. ರಕ್ತದಲ್ಲಿ ಸಕ್ಕರೆ ಅಂಶವನ್ನು ಸರಿಯಾದ ಪ್ರಮಾಣದಲ್ಲಿಡುವುದು. ರಕ್ತದ ಏರೊತ್ತಡ ನಿಯಂತ್ರಣ, ವ್ಯಾಯಾಮ, ಕಡಿಮೆ ಉಪ್ಪು ಸೇವನೆ (5 ಗ್ರಾಂ ಪ್ರತಿ ದಿನಕ್ಕೆ), ದೇಹದ ತೂಕವನ್ನು ವಯಸ್ಸು ಮತ್ತು ಎತ್ತರಕ್ಕೆ ಅನುಗುಣವಾಗಿ ಕಾಯ್ದುಕೊಳ್ಳುವುದು, ನಿಗದಿತ ಸಮಯಕ್ಕೆ ಸರಿಯಾಗಿ ವೈದ್ಯಕೀಯ ತಪಾಸಣೆ, ಸೋಂಕು ಬಂದಾಗ ಸೂಕ್ತ ಚಿಕಿತ್ಸೆಗಳ ಬಗ್ಗೆ ಗಮನವಿಡಬೇಕು. ಬಹಳಷ್ಟು ಜನರಲ್ಲಿ ರಕ್ತದ ಏರೊತ್ತಡ (ಬಿಪಿ) ತೊಂದರೆಗೆ ನಿರಂತರ ಚಿಕಿತ್ಸೆ ಅವಶ್ಯಕ. ರಕ್ತದಲ್ಲಿ ಸಕ್ಕರೆ ಅಂಶ ಮತ್ತು ಬಿಪಿ ಹತೋಟಿಯಲ್ಲಿದೆ ಎಂದು ಮಾತ್ರೆಗಳನ್ನು ನಿಲ್ಲಿಸುವುದು ಅಪಾಯಕಾರಿ. ನಮ್ಮ ಸಾವಿನ ಗುಂಡಿಯನ್ನು ನಾವೇ ತೋಡಿಕೊಂಡಂತೆ. ಅಲೋಪತಿ ವೈದ್ಯರು ಬಿಪಿ ಮತ್ತು ಸಕ್ಕರೆ ಕಾಯಿಲೆಗೆ ನಿರಂತರ ಮಾತ್ರೆ ಸೇವಿಸಲು ಹೇಳುತ್ತಾರೆ ಎಂಬ ಭಯದಿಂದ ವೈದ್ಯರಿಂದ ದೂರ ಇರಬೇಕೆಂದು ಅನೇಕರು ಬಯಸುತ್ತಾರೆ. ಸಂಪೂರ್ಣವಾಗಿ ಈ ಕಾಯಿಲೆಗಳಿಂದ ಮುಕ್ತಿ ಪಡೆಯಬೇಕೆಂದು ಈ ಕಾಯಿಲೆಗಳ ಬಗ್ಗೆ ಜ್ಞಾನವೇ ಇರದ ಢೋಂಗಿ ವೈದ್ಯರಿಂದ ಅವರ ಸುಳ್ಳು ಮಾತುಗಳನ್ನು ನಂಬಿ ಹಲವಾರು ಮಾತ್ರೆಗಳನ್ನು ಸೇವಿಸುತ್ತಾ, ತಮ್ಮ ಕಿಡ್ನಿಯ ಮೇಲೆ ತಾವೇ ಕಲ್ಲು ಹಾಕಿಕೊಳ್ಳುವುದು ನಮ್ಮ ದೇಶದಲ್ಲಿ ಸರ್ವೇ ಸಾಮಾನ್ಯ.

ಮೂತ್ರನಾಳ ಅಥವಾ ಮೂತ್ರಪಿಂಡಗಳ ಸೋಂಕು ಉಂಟಾದಾಗ, ಶೀಘ್ರ ಚಿಕಿತ್ಸೆ ಅವಶ್ಯಕ. ಉರಿಮೂತ್ರ, ಜ್ವರ, ವಾಂತಿ, ಹೊಟ್ಟೆನೋವು ಕಡಿಮೆಯಾದ ಕೂಡಲೇ ಸೋಂಕು ನಿವಾರಕ ಮಾತ್ರೆಗಳನ್ನು ನಿಲ್ಲಿಸಬಾರದು. ತಜ್ಞ ವೈದ್ಯರ ಸಲಹೆಯಂತೆ 7 ರಿಂದ 14 ದಿನ ತೆಗೆದುಕೊಳ್ಳುವ ಅವಶ್ಯಕತೆ ಇರುತ್ತದೆ. ಕಿಡ್ನಿಗೆ ಸೋಂಕು, ಕೆಮ್ಮು ಅಥವಾ ನೆಗಡಿಯಷ್ಟು ಸುಲಭವಾಗಿ ಬರುವುದಿಲ್ಲ. ಭದ್ರಕೋಟೆಯಲ್ಲಿರುವ ಈ ಕಿಡ್ನಿಗಳಿಗೆ ಸೋಂಕು ಬಂದಿದೆ ಎಂದು ಖಚಿತವಾದರೆ, ಅದಕ್ಕೆ ಕಾರಣ ಶೋಧಿಸಲೇಬೇಕು ಮತ್ತು ಪುನಃ ಸೋಂಕು ಬರದಂತೆ ಕ್ರಮ ತೆಗೆದುಕೊಳ್ಳಬೇಕು.

ಮೂತ್ರಪಿಂಡ ಅಥವಾ ನಾಳದಲ್ಲಿ ಕಲ್ಲುಗಳಿದ್ದರೆ ಚಿಕಿತ್ಸೆ ಅತ್ಯವಶ್ಯಕ. ಕಲ್ಲುಗಳಿಂದ ನೋವಿನ ಜೊತೆಗೆ ಮೂತ್ರಪಿಂಡ ಅಥವಾ ನಾಳದ ಸೋಂಕು ಕೂಡ ಬರಬಹುದು. ಹಲವು ಬಾರಿ ಸೋಂಕು ಪುನರಾವರ್ತನೆಯಾದರೆ, ಕಿಡ್ನಿ ಕಾರ್ಯ ಕ್ಷಮತೆಯಲ್ಲಿ ನ್ಯೂನತೆ ಉಂಟಾಗುವ ಸಂಭವ ಇರುತ್ತದೆ.

ಪಾಲಿಸಿಸ್ಟಕ್ ಕಿಡ್ನಿ ಎಂಬ ಅನುವಂಶಿಕ ತೊಂದರೆಯಿಂದ ಬಳಲುವ ವ್ಯಕ್ತಿ ಮತ್ತು ಅವರು ಕ್ರಮಬದ್ದ ತಪಾಸಣೆ ಮಾಡಿಸಿಕೊಳ್ಳಬೇಕು. ಈ ಕಾಯಿಲೆ ಹತೋಟಿಯಲ್ಲಿಡಲು ಹಲವು ಹೊಸ ಚಿಕಿತ್ಸೆಗಳಿವೆ. ಮೂತ್ರದ ಮಾರ್ಗದಲ್ಲಿ ಅಡಚಣೆಯಿದ್ದರೆ, ಅದು ಕಿಡ್ನಿ ಮೇಲೆ ಒತ್ತಡ ಹಾಕುತ್ತದೆ ಮತ್ತು ಸೋಂಕಿಗೆ ದಾರಿ ಮಾಡಿಕೊಡುತ್ತದೆ. ಅಡಚಣೆ ವಿಚಾರಿಸುವುದು ಬಹಳ ಉಪಯುಕ್ತ.

ನೋವು ನಿವಾರಕ ಮಾತ್ರೆಗಳನ್ನು ದೀರ್ಘಾವಧಿ ಕಾಲ ಸೇವಿಸುವವರು ವೈದ್ಯರ ಸಲಹೆ ಪಡೆಯುವುದು ಅಗತ್ಯ, ನೋವು ಮಾತ್ರೆಗಳು ಕಿಡ್ನಿ ಮೇಲೆ ದುಷ್ಪರಿಣಾಮ ಬೀರುತ್ತವೆ.

ದೇಹದಿಂದ ಅತಿ ಹೆಚ್ಚು ಪ್ರಮಾಣದಲ್ಲಿ ನೀರು (ಉದಾ: ವಾಂತಿ, ಭೇದಿ) ಅಥವಾ ರಕ್ತ ಸೋರಿಕೆಯಾದರೆ ಕೂಡಲೇ ಚಿಕಿತ್ಸೆ ಪಡೆಯಬೇಕು. ಪ್ರೋಸ್ಟೇಟ್ ಗ್ಲ್ಯಾಂಡ್ ಗಾತ್ರದಲ್ಲಿ ದೊಡ್ಡದಾಗಿದ್ದರೆ ಸೂಕ್ತ ಚಿಕಿತ್ಸೆ ಪಡೆಯಬೇಕು.

**ಮೂತ್ರಪಿಂಡಕ್ಕೆ ಸಂಬಂಧಿದ ಎಲ್ಲಾ ಕಾಯಿಲೆಗಳಲ್ಲೂ ಬಾವು ಕಂಡುಬರುವುದೇ ?**

ದೇಹದ ಊತ ಅಥವಾ ಬಾವು ಕಿಡ್ನಿ ವೈಫಲ್ಯತೆಯ ತೀವ್ರತರ ಹಂತದಲ್ಲಿ ಮತ್ತು ಹೆಚ್ಚು ಪ್ರಮಾಣದಲ್ಲಿ ಮೂತ್ರದಲ್ಲಿ ಪ್ರೋಟೀನ್ ಸೋರಿಕೆ ಉಂಟಾದಾಗ ಮಾತ್ರ ಬರುತ್ತದೆ. ಎಲ್ಲಾ ಮೂತ್ರಪಿಂಡ ಕಾಯಿಲೆಗಳಲ್ಲಿ ಬಾವು ಇರುವುದಿಲ್ಲ.

**ಮೂತ್ರಪಿಂಡ ವೈಫಲ್ಯತೆಯಲ್ಲಿ ತಜ್ಞ ವೈದ್ಯರು ಹಲವಾರು ಔಷಧಿಗಳನ್ನು ಸೇವಿಸಲು ಸೂಚಿಸಿರುತ್ತಾರೆ. ಇದು ಅವಶ್ಯಕವೇ ?**

ಮೂತ್ರಪಿಂಡ ವೈಫಲ್ಯತೆ ಹಂತ-ಹಂತವಾಗಿ ಕಾಣಿಸಿಕೊಳ್ಳುತ್ತದೆ. ಪ್ರತೀ ಹಂತ ವೈಫಲ್ಯತೆಯ ತೀವ್ರತೆಯನ್ನು ತಡೆಗಟ್ಟಲು ಔಷಧಿಗಳ ಅವಶ್ಯಕತೆ ಇರುತ್ತದೆ. ಹಾಗೇಯೇ ರಕ್ತದಲ್ಲಿ ಹಿಮೋಗ್ಲೋಬಿನ್ ಮಟ್ಟ ಕಾಯ್ದುಕೊಳ್ಳಲು, ಬ್ಲಡ್‌ಪ್ರೆಶರ್ ನಿಯಂತ್ರಣಕ್ಕೆ, ಎಲುಬುಗಳ ಆರೋಗ್ಯಕ್ಕೆ ಬಗೆಬಗೆಯ ಮಾತ್ರೆಗಳನ್ನು ಸೇವಿಸಿವುದು ಅನಿವಾರ್ಯವಾಗಿರುತ್ತದೆ. ಬ್ಲಡ್‌ಪ್ರೆಶರ್ (ರಕ್ತದ ಒತ್ತಡ) ನಿಯಂತ್ರಣಕ್ಕೆ ಕೆಲವು 3 ರಿಂದ 4 ವಿಧವಾದ ಮಾತ್ರೆಗಳ ಅವಶ್ಯಕತೆ ಇರುತ್ತದೆ.

**ಮೂತ್ರಪಿಂಡಕ್ಕೆ ಸಂಬಂಧಿಸಿದ ರೋಗಗಳನ್ನು ಪತ್ತೆಹಚ್ಚಲು ಅವಶ್ಯಕವಾದ ಪರೀಕ್ಷೆಗಳು ಯಾವುವು ?**

ಕೆಲವು ಸರಳ ರಕ್ತ ಪರೀಕ್ಷೆಗಳು, ಮೂತ್ರ ಪರೀಕ್ಷೆಗಳು, ಕ್ಷ-ಕಿರಣ ಮತ್ತು ಇತರೆ ಪರೀಕ್ಷೆಗಳ ಮೂಲಕ ಕಂಡುಹಿಡಿಯಬಹುದು. ಈ ಪರೀಕ್ಷೆಗಳ ನಂತರ ಅಗತ್ಯವಿದ್ದಲ್ಲಿ ಹೆಚ್ಚು ವಿಧವಾದ ಪರೀಕ್ಷೆಗಳನ್ನು ಮಾಡಬಹುದು .

**ರಕ್ತ ಪರೀಕ್ಷೆಗಳು :** ಬ್ಲಡ್ ಯೂರಿಯಾ ನೈಟ್ರೋಜನ್ (Blood urea Nitrogen BUN), ಸೀರಂ ಕ್ರಿಯೇಟಿನಿನ್

**ಮೂತ್ರ ಪರೀಕ್ಷೆಗಳು :**

ಈ ಪರೀಕ್ಷೆಗಳು ಪ್ರೋಟೀನ್ ಸೋರಿಕೆಯ ಪ್ರಮಾಣ, ಕೆಂಪು ರಕ್ತಕಣಗಳು ಮತ್ತು ಕೀವಿನ ಕಣಗಳ ಇರುವಿಕೆಯನ್ನು ಸೂಚಿಸುತ್ತದೆ.

ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಕಂಪ್ಯೂಟೆಡ್ ಟೋಮೋಗ್ರಫಿ, ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್, ಅಣುಶಕ್ತಿ ವೈದ್ಯ (Nuclear Medicine)

**ಕಿಡ್ನಿ ವೈಫಲ್ಯತೆಗೆ ಆಧುನಿಕ ವೈದ್ಯ ಪದ್ಧತಿ (ಅಲೋಪತಿ) ಯಲ್ಲಿ ಇರುವ ಚಿಕಿತ್ಸಾ ಮಾರ್ಗಗಳು ಯಾವುವು?**

**ರಕ್ತ ಶುದ್ಧೀಕರಣ (ಡಯಾಲಿಸಿಸ್) :** ಮೂತ್ರಪಿಂಡದ ಕಸಿ ಮಾಡುವಿಕೆ (ಟ್ರಾನ್ಸ್‌ಪ್ಲಾಂಟೇಷನ್ ) - ರಕ್ತವನ್ನು ಶುದ್ಧೀಕರಿಸುವ ಕಾಯವನ್ನು ನಿರ್ವ ಹಿಸಲು ಬೇರೊಬ್ಬ ವ್ಯಕ್ತಿಯಿಂದ ಹೊಸ ಮೂತ್ರಪಿಂಡವನ್ನು ಪಡೆಯುವುದು. ಹೊಸ ಮೂತ್ರಪಿಂಡವನ್ನು ಕಸಿ ಮಾಡಿದ ನಂತರವೂ ಜೀವನ ಪರ್ಯಂತ ಕೆಲವೊಂದು ಔಷಧಿಗಳನ್ನು ಸೇವಿಸುತ್ತಲೇ ಇರಬೇಕು.

**ಡಯಾಲಿಸಿಸ್‌ನಲ್ಲಿ ಎಷ್ಟು ವಿಧ ಇರುತ್ತವೆ?**

**Hemodialysis (ರಕ್ತ ಶುದ್ಧೀಕರಣ) :** ಕೃತಕ ಫಿಲ್ಟರ್ ಸಹಾಯದಿಂದ ರಕ್ತವನ್ನು ವಾರಕ್ಕೆ 2-3 ಬಾರಿ ಶುದ್ಧೀಕರಿಸಲಾಗುತ್ತದೆ.

**ಪೆರಿ ಟೋನಿಯಲ್ ಡಯಾಲಿಸಿಸ್ :** ಈ ಚಿಕಿತ್ಸೆ ಹೆಚ್ಚು ವೆಚ್ಚದಾಯಕವಾಗಿದ್ದು, ಮನೆಯಲ್ಲಿ ಮಾಡಿಕೊಳ್ಳಬಹುದು.

**ಒಂದು ಬಾರಿ ಡಯಾಲಿಸಿಸ್ ಮೇಲೆ ಅವಲಂಬಿತವಾದರೆ, ಅದನ್ನು ಆಜೀವ ಪರ್ಯಂತ ಮಾಡಿಸಿಕೊಳ್ಳಲೇಬೇಕೇ ?**

ಕಿಡ್ನಿ ವೈಫಲ್ಯ ಎರಡು ಬಗೆಯದಾಗಿರುತ್ತದೆ. ಕೆಲವು ಬಾರಿ ಅತಿಯಾದ ವಾಂತಿ ಬೇಧಿ, ವಿಷದ ಹಾವು ಕಡಿತ, ತೀವ್ರ ಸೋಂಕಿನಿಂದ ತಾತ್ಕಾಲಿಕವಾಗಿ ಕಾಯ ಸ್ಥಗಿತಗೊಳ್ಳುತ್ತದೆ. ಕೆಲವೊಂದು ವಾರ ಅಥವಾ ತಿಂಗಳ ಕಾಲ ಡಯಾಲಿಸಿಸ್ ಮಾಡಿಸಿಕೊಳ್ಳುವುದರಿಂದ ಕಿಡ್ನಿ ಚೇತರಿಕೆ ಸಂಪೂರ್ಣವಾಗಿ ಸಾಧ್ಯವಾಗುತ್ತದೆ. ಆದರೆ ದೀರ್ಘ ಕಾಲದ ವೈಫಲ್ಯದಲ್ಲಿ, ಈ ರೀತಿಯ ಚೇತರಿಕೆ ಅಸಾಧ್ಯ ಎಂಬ ಕಟು ಸತ್ಯವನ್ನು ರೋಗಿ ಮನದಟ್ಟು ಮಾಡಿಕೊಳ್ಳಬೇಕು.

*ದೇಹದ ಪ್ರತಿ ಅಂಗಗಳೂ ಅದರದ್ದೇ ಆದ ಕಾರ್ಯಗಳನ್ನು ವ್ಯವಸ್ಥಿತವಾಗಿ ಮಾಡುವ ಮೂಲಕ ನಮ್ಮ ಆರೋಗ್ಯವನ್ನು (Health) ರಕ್ಷಣೆ ಮಾಡುತ್ತವೆ. ಇಂತಹ ಅಂಗಗಳಲ್ಲಿ ಒಂದು ಮೂತ್ರಪಿಂಡ. ಮೂತ್ರಪಿಂಡಗಳು ಅನೇಕ ಪ್ರಮುಖ ಕಾರ್ಯಗಳನ್ನು ನಿರ್ವಹಿಸುವ ಸಣ್ಣ ಅಂಗ. ಇದು ತ್ಯಾಜ್ಯ ಉತ್ಪನ್ನಗಳನ್ನು ಫಿಲ್ಟರ್ ಮಾಡುವ, ದೇಹದಲ್ಲಿ ದ್ರವ ಪದಾರ್ಥ ಸಮತೋಲನಗೊಳಿಸುವ ಹಾಗೆಯೇ ಇನ್ನೂ ಅನೇಕ ಅಗತ್ಯ ಕೆಲಸಗಳನ್ನು ಮಾಡುತ್ತದೆ.*

ssims | Narayana Health

**ಆರೋಗ್ಯ ಕಾಯುವ ನಮ್ಮ ಕಿಡ್ನಿಗಳಿಗಾಗಿ...**

* ಫಿಟ್ ಆಗಿರಿ ಮತ್ತು ಜಡ ಜೀವನ ಶೈಲಿಯನ್ನು ತಪ್ಪಿಸಿ
* ಆರೋಗ್ಯಕರ ಸಮತೋಲಿತ ಆಹಾರವನ್ನು ಹೊಂದಿರಿ
* ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರಿಶೀಲಿಸಿ ಮತ್ತು ನಿರ್ವಹಿಸಿ
* ರಕ್ತದೊತ್ತಡದ ಮಟ್ಟವನ್ನು ಪರೀಕ್ಷಿಸಿ ಮತ್ತು ನಿರ್ವಹಿಸಿ
* ಸೂಕ್ತವಾದ ದ್ರವವನ್ನು ಕುಡಿಯಿರಿ (8 ಗ್ಲಾಸ್)
* ತಂಬಾಕು ಸೇವನೆಯಿಂದ ದೂರವಿರಿ.

**ಕಿಡ್ನಿ ತಪಾಸಣೆಗಾಗಿ ಸಂಪರ್ಕಿಸಿ: 18003 090309**